ವಿಜಯಪುರ । ಸಂಪುಟ 04 । ಸಂಚಿಕೆ 242 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶುಕ್ರವಾರ, ನವೆಂಬರ್ 20, 2026



"2028ರಲ್ಲಿ ನಡೆಯಲಿರುವ ಕರ್ನಾಟಕ ವಿಧಾನಸಭೆ ಚುನಾವಣೆ ಸೇರಿದಂತೆ ಇನ್ನು ಮುಂದೆ ಯಾವುದೇ ಚುನಾವಣೆಯಲ್ಲಿ ನಾನು ಸ್ಪರ್ಧಿಸುವುದಿಲ್ಲ. ಏಕೆಂದರೆ ನನಗೀಗ 80 ವರ್ಷ ವಯಸ್ಸು. ದೆಹಲಿ ಕಾರ್ಯಕ್ರಮಕ್ಕೆ ತಡವಾಗಿ ಹೋದ ಕಾರಣ ಹಿಂದೆಕುಳಿತು ಕೊಳ್ಳಬೇಕಾಯಿತು. ಇದಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ."

■ ಸಿದ್ದರಾಮಯ್ಯ
ಮಾಜಿ ಮುಖ್ಯಮಂತ್ರಿ

ಸಾರ್ವಜನಿಕ ದೂರುಗಳ ತ್ವರಿತ ವಿಲೇವಾರಿ ಮೂಲಕ ಜನಸ್ನೇಹಿ ಆಡಳಿತಕ್ಕೆ ಆದ್ಯತೆ

ವಿಜಯಪುರದಲ್ಲಿ ನಡೆದ ದೂರುಗಳ ವಿಚಾರಣೆ ಮತ್ತು ವಿಲೇವಾರಿ ಸಭೆಯಲ್ಲಿ ಕರ್ನಾಟಕದ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹೇಳಿಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವುದು, ಆಡಳಿತದಲ್ಲಿನ ಲೋಪದೋಷಗಳನ್ನು ಸರಿಪಡಿಸುವುದು ಹಾಗೂ ಜನರಿಗೆ ಉತ್ತಮ ಜೀವನಮಟ್ಟ ಕಲ್ಪಿಸುವ ಉದ್ದೇಶದಿಂದ ಲೋಕಾಯುಕ್ತ ಸಂಸ್ಥೆಯು ದೂರುಗಳ ವಿಲೇವಾರಿ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಕರ್ನಾಟಕದ ಉಪಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಹೇಳಿದರು.

ನಗರದ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಗುರುವಾರ ಜಿಲ್ಲಾ ಮಟ್ಟದ ಅಧಿಕಾರಿಗಳು, ದೂರುದಾರರು ಹಾಗೂ ಎದುರುದಾರರ ಸಮ್ಮುಖದಲ್ಲಿ ನಡೆದ ದೂರುಗಳ ವಿಚಾರಣೆ ಮತ್ತು ವಿಲೇವಾರಿ ಸಭೆಯಲ್ಲಿ ಮಾತನಾಡಿದ ಅವರು, ಈ ಬಾರಿ ಈಗಾಗಲೇ ದಾಖಲಾಗಿರುವ ಪ್ರಕರಣಗಳ ವಿಚಾರಣೆ ಮತ್ತು ವಿಲೇವಾರಿಗೆ ಹೆಚ್ಚಿನ ಸಮಯ ಮೀಸಲಿಡಲಾಗಿದೆ. ಪ್ರಕರಣಗಳ ವಿಚಾರಣೆಗೆ ಒಂದು ತಿಂಗಳ ಮುಂಚಿತವಾಗಿಯೇ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳಿಗೆ ಪಟ್ಟಿಯನ್ನು ಕಳುಹಿಸಿ, ಐದು ಪೂರ್ವಭಾವಿ ಸಭೆಗಳ ಮೂಲಕ ಅಗತ್ಯ ಸಿದ್ಧತೆ ಹಾಗೂ ಸೂಚನೆಗಳನ್ನು ನೀಡಲಾಗಿದೆ ಎಂದರು.

ಕಟ್ಟಡ ನಿರ್ಮಾಣ, ರಸ್ತೆ ಕಾಮಗಾರಿ, ಕೆರೆ-ಕಟ್ಟೆಗಳ ಒತ್ತುವರಿ ಸೇರಿದಂತೆ ತಾಂತ್ರಿಕ ಪರಿಶೀಲನೆ ಹಾಗೂ ತನಿಖೆಯ ಅಗತ್ಯವಿರುವ ಮತ್ತು ಪೊಲೀಸ್ ತನಿಖೆಗೆ ಒಳಪಡುವ ಪ್ರಕರಣಗಳನ್ನು ಹೊರತುಪಡಿಸಿ, ಸಾರ್ವಜನಿಕರ ವೈಯಕ್ತಿಕ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ದ ದೂರುಗಳ ಕುರಿತು ಇಂದು ಮತ್ತು ನಾಳೆ ವಿಚಾರಣೆ ನಡೆಸಿ ಸಾಧ್ಯವಾದಷ್ಟು ಸ್ಥಳದಲ್ಲಿಯೇ ಪರಿಹಾರ ಕಲ್ಪಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು. ಭಾರತದ ಸಂವಿಧಾನವು ಪ್ರತಿಯೊಬ್ಬರಿಗೂ ಸಮಪಾಲು, ಸಮಬಾಳು ಹಾಗೂ ಗೌರವಯುತ ಜೀವನ ನಡೆಸುವ ಅವಕಾಶ ಕಲ್ಪಿಸುವ ಆಶಯ ಹೊಂದಿದೆ. ಆರೋಗ್ಯ, ಶಿಕ್ಷಣ, ಉದ್ಯೋಗ, ಕೃಷಿ ಹಾಗೂ ಆಸ್ತಿ-ಪಾಸ್ತಿಗಳ ರಕ್ಷಣೆಗೆ ಸರ್ಕಾರ ಹಲವು ಕಾನೂನು ಮತ್ತು ಯೋಜನೆಗಳನ್ನು ರೂಪಿಸಿದೆ. ಇವುಗಳ ಪ್ರಯೋಜನ ಅರ್ಹರಿಗೆ ಸಕಾಲದಲ್ಲಿ ತಲುಪಿಸುವ ಹೊಣೆಗಾರಿಕೆ ಅಧಿಕಾರಿಗಳ ಮೇಲಿದೆ ಎಂದರು.


ಲೋಕಾಯುಕ್ತ ಸಂಸ್ಥೆಯ ಮೇಲೆ ಸಾರ್ವಜನಿಕರಲ್ಲಿ ವಿಶ್ವಾಸ ಹೆಚ್ಚಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ದಾಖಲಾಗುತ್ತಿವೆ. ತಾವು ಪ್ರತಿದಿನ ಸುಮಾರು 300ರಿಂದ 400 ಕಡತಗಳನ್ನು ಪರಿಶೀಲಿಸುತ್ತಿರುವುದಾಗಿ ತಿಳಿಸಿದ ಅವರು, ಎಲ್ಲ ಇಲಾಖೆಗಳಲ್ಲಿಯೂ ಕೆಲಸದ ಒತ್ತಡವಿರುವುದು ಸಹಜ. ಆದರೂ ಅಧಿಕಾರಿಗಳು ನಿಯಮಾನುಸಾರ ಕರ್ತವ್ಯ ನಿರ್ವಹಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದರು.

ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಸಾರ್ವಜನಿಕರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಉಪಲೋಕಾಯುಕ್ತರು ಜಿಲ್ಲೆಗೆ ಆಗಮಿಸಿ ದೂರುದಾರರು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಸಲು ಈ ಸಭೆ ಆಯೋಜಿಸಲಾಗಿದೆ ಎಂದರು.

ಸಭೆಗೆ ಪೂರ್ವಭಾವಿಯಾಗಿ ಐದು ಸಭೆಗಳನ್ನು ನಡೆಸಿ, ಲೋಕಾಯುಕ್ತ ಕಚೇರಿಯಲ್ಲಿ ದಾಖಲಾಗಿರುವ ದೂರುಗಳನ್ನು ಇಲಾಖಾವಾರು ವಿಂಗಡಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ರವಾನಿಸಲಾಗಿದೆ. ಪ್ರತಿಯೊಂದು ದೂರಿನ ಕುರಿತು ಕೈಗೊಂಡ ಕ್ರಮಗಳ ಅನುಪಾಲನಾ ವರದಿಯೊಂದಿಗೆ ಅಧಿಕಾರಿಗಳು ಹಾಜರಾಗುವಂತೆ ಸೂಚಿಸಲಾಗಿದೆ. ಪ್ರಕರಣ ಇತ್ಯರ್ಥಗೊಂಡಿದ್ದರೆ ಅದರ ವಿವರ ಹಾಗೂ ಇತ್ಯರ್ಥ ಸಾಧ್ಯವಾಗದಿದ್ದರೆ ಅದಕ್ಕೆ ಸೂಕ್ತ ಕಾರಣಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ ಹಾಗರಗಿ, ಉಪಲೋಕಾಯುಕ್ತರ ಆಪ್ತ ಕಾರ್ಯದರ್ಶಿ ಕಿರಣ್ ಪಾಟೀಲ, ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಆನಂದ ಪ್ರಕಾಶ ಮೀನಾ, ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಮಹಾನಿಂಗ ನಂದಗಾವಿ,ವಿಜಯಪುರ ಉಪ ವಿಭಾಗಾಧಿಕಾರಿಗಳಾದ ಶ್ರೀಮತಿ ಜುಫಿಶಾನ್ ಹಕ್, ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಜಿಪಂ ಉಪ ಕಾರ್ಯದರ್ಶಿಗಳಾದ ಪ್ರಕಾಶ ವಡ್ಡರ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ದೂರುದಾರರು ಹಾಗೂ ಎದುರುದಾರರ ಬಾಕಿ ವಿಚಾರಣೆ ನಡೆಸಿದರು.

ಸಾರ್ವಜನಿಕರ ದೂರುಗಳ ವಿಚಾರಣೆ ನಡೆಸಿ ಪರಿಹಾರ ಒದಗಿಸಿದ ಉಪ ಲೋಕಾಯುಕ್ತರು



ವಿಜಯಪುರ: ಜಿಲ್ಲೆಯ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಸಾರ್ವಜನಿಕರು ಸಲ್ಲಿಸಿರುವ ದೂರುಗಳು ಹಾಗೂ ಬಾಕಿ ಇರುವ ಪ್ರಕರಣಗಳ ಕುರಿತು ವಿಚಾರಣೆ ನಡೆಸಿದ ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ ಅವರು, ದೂರುದಾರರು ಮತ್ತು ಎದುರುದಾರರ ಅಹವಾಲುಗಳನ್ನು ಆಲಿಸಿ, ಪ್ರಕರಣಗಳನ್ನು ಕಾನೂನಾತ್ಮಕವಾಗಿ ಪರಿಶೀಲಿಸಿ ಸೂಕ್ತ ಪರಿಹಾರ ಹಾಗೂ ಮಾರ್ಗದರ್ಶನ ಒದಗಿಸಿದರು.

ದೂರುದಾರರು ತಮ್ಮ ಅಹವಾಲುಗಳನ್ನು ನೇರವಾಗಿ ಮಂಡಿಸಲು ಹಾಗೂ ಸಂಬಂಧಿತ ದಾಖಲೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಿದ ಅವರು, ಎದುರುದಾರರಿಗೂ ತಮ್ಮ ನಿಲುವು ಮತ್ತು ದಾಖಲೆಗಳನ್ನು ಮಂಡಿಸಲು ಸಮಾನ ಅವಕಾಶ ನೀಡಿದರು.

ಪ್ರಕರಣಗಳ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಪ್ರಸ್ತುತ ಸ್ಥಿತಿಗತಿ, ಕೈಗೊಂಡಿರುವ ಕ್ರಮಗಳು ಹಾಗೂ ಬಾಕಿ ಉಳಿಯಲು ಕಾರಣಗಳ ಬಗ್ಗೆ ಮಾಹಿತಿ ಪಡೆದು, ಅರ್ಹ ಪ್ರಕರಣಗಳಲ್ಲಿ ತ್ವರಿತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಲೋಕಾಯುಕ್ತರ ವ್ಯಾಪ್ತಿಗೆ ಒಳಪಡದ ಪ್ರಕರಣಗಳಲ್ಲಿ ನ್ಯಾಯಾಲಯದ ಮೂಲಕ ಪರಿಹಾರ ಪಡೆಯುವ ಅವಕಾಶಗಳ ಕುರಿತು ಮಾಹಿತಿ ನೀಡಿದ ಅವರು, ಆರ್ಥಿಕವಾಗಿ ದುರ್ಬಲರಾಗಿರುವವರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಮೂಲಕ ಉಚಿತ ಕಾನೂನು ನೆರವು ಪಡೆಯಬಹುದು ಎಂದು ತಿಳಿಸಿದರು. ಸರ್ಕಾರಿ ಜಮೀನು ಒತ್ತುವರಿ ತೆರವುಗೊಳಿಸುವಂತೆ ಸಲ್ಲಿಸಲಾದ ದೂರಿನ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.



ಬಸ್ ಪ್ರಯಾಣ ದರ ಏರಿಕೆ ಹಿಂಪಡೆಯಲು ಕರವೇ ಆಗ್ರಹ

ಜನಸಾಮಾನ್ಯರ ಮೇಲೆ ಆರ್ಥಿಕ ಹೊರೆ ಹಾಕುವ ನಿರ್ಧಾರ ಖಂಡನೀಯ । ದರ ಏರಿಕೆ ಹಿಂಪಡೆಯದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ । ಸರ್ಕಾರಕ್ಕೆ ಮನವಿ ಸಲ್ಲಿಕೆ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಕರ್ನಾಟಕ ರಾಜ್ಯ ಸರ್ಕಾರ ಯಾವುದೇ ಮುನ್ಸೂಚನೆ ನೀಡದೆ ಏಕಾಏಕಿ ಬಸ್ ಪ್ರಯಾಣ ದರ ಏರಿಕೆ ಮಾಡಿರುವುದನ್ನು ತೀವ್ರವಾಗಿ ಖಂಡಿಸಿರುವ ಕರ್ನಾಟಕ ರಕ್ಷಣಾ ವೇದಿಕೆ, ಕೂಡಲೇ ದರ ಏರಿಕೆ ನಿರ್ಧಾರವನ್ನು ಹಿಂಪಡೆಯುವಂತೆ ಒತ್ತಾಯಿಸಿ ಬುಧವಾರ ತಹಶೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿತು.

ಕರ್ನಾಟಕ ರಕ್ಷಣಾ ವೇದಿಕೆಯ (ಪ್ರವೀಣ ಶೆಟ್ಟಿ ಬಣ) ತಾಲೂಕು ಘಟಕದ ಅಧ್ಯಕ್ಷ ರವಿ ಗೊಳಸಂಗಿ ನೇತೃತ್ವದಲ್ಲಿ ಸಲ್ಲಿಸಿದ ಮನವಿಯಲ್ಲಿ, ಬಸ್ ಪ್ರಯಾಣ ದರ ಏರಿಕೆಯಿಂದ ಬಡವರು, ವಿದ್ಯಾರ್ಥಿಗಳು, ಕಾರ್ಮಿಕರು ಹಾಗೂ ದಿನನಿತ್ಯ ಪ್ರಯಾಣಿಸುವ ಜನಸಾಮಾನ್ಯರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು.ಸರ್ಕಾರದ ದರ ಏರಿಕೆ ಕ್ರಮ ಜನವಿರೋಧಿಯಾಗಿದ್ದು, ಜನರ ಹಿತ ಕಾಪಾಡಬೇಕಾದ ಸರ್ಕಾರವೇ ಜನರ ಮೇಲೆ ಹೆಚ್ಚುವರಿ ಆರ್ಥಿಕ ಹೊರೆ ಹೇರುವುದು ಸರಿಯಲ್ಲ. ಅಧಿಕಾರಕ್ಕೆ ಬರುವ ಮುನ್ನ ಜನರಿಗೆ ನೂರಾರು ಭರವಸೆಗಳನ್ನು ನೀಡಿದ ಸರ್ಕಾರ, ಇದೀಗ ಬೆಲೆ ಏರಿಕೆ ಹಾಗೂ ಪ್ರಯಾಣ ದರ ಹೆಚ್ಚಳದ ಮೂಲಕ ಜನಸಾಮಾನ್ಯರ ಬದುಕನ್ನು ಸಂಕಷ್ಟಕ್ಕೆ ದೂಡುತ್ತಿದೆ. ಇಂತಹ ಆಡಳಿತ ನೀತಿ ಖಂಡನೀಯವಾಗಿದ್ದು, ಮುಖ್ಯಮಂತ್ರಿ ಕೂಡಲೇ ಬಸ್ ಪ್ರಯಾಣ ದರ ಏರಿಕೆ ಆದೇಶವನ್ನು ಹಿಂಪಡೆಯಬೇಕು ಎಂದು ಸಂಘಟನೆಯ ಪದಾಧಿಕಾರಿಗಳು ಒತ್ತಾಯಿಸಿದರು.

ಸರ್ಕಾರ ಜನರ ಸಂಕಷ್ಟವನ್ನು ಅರಿತು ದರ ಏರಿಕೆ ನಿರ್ಧಾರವನ್ನು ತಕ್ಷಣ ವಾಪಸ್ ಪಡೆಯಬೇಕು. ಇಲ್ಲವಾದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು. ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ರವಿ ಗೊಳಸಂಗಿ, ಶ್ರೀಧರ ಬಳೆಗಾರ, ಪ್ರದೀಪ ಪಾಟೀಲ, ಯಮನೂರಿ ಮಾಕಾಳಿ, ಪರಶುರಾಮ ಮಾಕಾಳಿ, ಶಿವು ವಾಲಿಕಾರ, ಸುರೇಶ ದಳವಾಯಿ, ಅಶೋಕ ಗಣಿ ಹಾಗೂ ಸುರೇಶ ಸಾರವಾಡ ಉಪಸ್ಥಿತರಿದ್ದರು.

ರವಿ ಹಂಜ ಮೇಲೆ ಕಾನೂನು ಕ್ರಮಕ್ಕೆ ಬೆಳ್ಳುಬ್ಬಿ ಆಗ್ರಹ



■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ವಿಶ್ವಗುರು ಜಗಜ್ಯೋತಿ ಬಸವಣ್ಣನವರ ಕುರಿತು ಮತ್ತು 12ನೇ ಶತಮಾನದ ಶರಣ ಸಂಕುಲದ ಬಗ್ಗೆ ಅಪಮಾನವಾಗುವ ರೀತಿಯಲ್ಲಿ ಬಸವ ಮಂಟಪ ಎಂಬ ಕೃತಿಯನ್ನು ಹೊರಗೆ ತಂದ ಸಂಪಾದಕ ರವಿ ಹಂಜ ಅವರ ಮೇಲೆ ಕಾನೂನು ರೀತಿ ಕ್ರಮ ಕೈಗೊಳ್ಳಬೇಕು ಆ ಪುಸ್ತಕವನ್ನು ಈ ಕೂಡಲೇ ಸರಕಾರ ಬ್ಯಾನ್ ಮಾಡಬೇಕು ಎಂದು ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ ಆಗ್ರಹಿಸಿದರು. ಈ ಕುರಿತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ನಮ್ಮ ಅಸ್ಮಿತೆ ನಾಡಿನ ಸಂಸ್ಕೃತಿಕ ನಾಯಕ ಮನುಜಕುಲವೊಂದೇ ಎಂದು 12ನೇ ಶತಮಾನದಿಂದಲೇ ಸಮಾನತೆಯ ಸಂದೇಶವನ್ನು ಸಾರಿದ ಬಸವಣ್ಣನವರ ಕುರಿತು ಕೆಟ್ಟ ಪದಗಳಲ್ಲಿ ವರ್ಣಿಸಿರುವ ರವಿ ಹಂಜು ಯಾವ ಇತಿಹಾಸ ಪುಸ್ತಕದ ತಿರುಳನ್ನು ಅರಿತು ಬರೆದಿದ್ದಾರೆ ಎನ್ನುವದನ್ನು ನಾಡಿನ ದೇಶದ ಜನತೆಗೆ ಸ್ಪಷ್ಟಪಡಿಸಬೇಕು. ಬಸವಣ್ಣನವರಿಗೆ ಅಪಮಾನವಾಗುವ ರೀತಿಯಲ್ಲಿರುವ ಪುಸ್ತಕವನ್ನು ಖಂಡಿಸಬೇಕು ಎಂದು ಹೇಳಿದರು.

ರಾಜಕೀಯ ಪಕ್ಷಗಳ ಮುಖಂಡರಿಗೆ ವೇಳಾಪಟ್ಟಿ ಮಾಹಿತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕೈಗೊಳ್ಳಲಾಗುತ್ತಿದ್ದು, ಜನವರಿ 20ರಂದು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು ಎಂದು 30-ಬಿಜಾಪುರ ನಗರ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿ ವಿಜಯಕುಮಾರ ಮೆಕ್ಕಳಕಿ ಅವರು ತಿಳಿಸಿದರು.

ಈ ಕುರಿತು ನವೆಂಬರ್ 18ರಂದು ವಿಜಯಪುರ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಸಿ, ಪರಿಷ್ಕರಣೆಯ ಪರಿಷ್ಕೃತ ವೇಳಾಪಟ್ಟಿ ಹಾಗೂ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಹಿತಿ ನೀಡಲಾಯಿತು. ವೇಳಾಪಟ್ಟಿಯಂತೆ ನವೆಂಬರ್ 23ರಂದು ಮತಗಟ್ಟೆಗಳ ತರ್ಕಬದ್ಧಗೊಳಿಸುವಿಕೆ ಹಾಗೂ ಮರುಹೊಂದಾಣಿಕೆ ಕಾರ್ಯ ನಡೆಯಲಿದೆ. ಡಿಸೆಂಬರ್ 1ರಂದು ಕರಡು ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುವುದು. ಡಿಸೆಂಬರ್ 1ರಿಂದ 31ರವರೆಗೆ ಮತದಾರರ ಪಟ್ಟಿಗೆ ಸಂಬಂಧಿಸಿದ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಜನವರಿ 14ರೊಳಗೆ ಅವುಗಳನ್ನು ವಿಲೇವಾರಿ ಮಾಡಲಾಗುವುದು. ಅಂತಿಮ ಮತದಾರರ ಪಟ್ಟಿಯನ್ನು ಜನವರಿ 20ರಂದು ಪ್ರಕಟಿಸಲಾಗುವುದು.

ಜನವರಿ 1, 2027 ಅನ್ನು ಅರ್ಹತಾ ದಿನಾಂಕವನ್ನಾಗಿ ಪರಿಗಣಿಸಿ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗದ ಯುವ ಮತದಾರರು ಹಾಗೂ ಮೊದಲ ಬಾರಿಗೆ ಮತದಾರರಾಗುವವರಿಗೆ ನೋಂದಣಿ ಮಾಡಿಕೊಳ್ಳಲು ವಿಶೇಷ ಅಭಿಯಾನ ಕೈಗೊಳ್ಳಲು ಚುನಾವಣಾ ಆಯೋಗ ಸೂಚಿಸಿದೆ. ಅಲ್ಲದೆ, ಮುಂದಿನ ಅರ್ಹತಾ ದಿನಾಂಕಗಳಾದ ಏಪ್ರಿಲ್ 1, ಜುಲೈ 1 ಹಾಗೂ ಅಕ್ಟೋಬರ್ 1, 2027ಕ್ಕೆ ಸಂಬಂಧಿಸಿದಂತೆ ಮುಂಗಡ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಪ್ರಜಾಪ್ರತಿನಿಧಿ ಕಾಯ್ದೆ 1950ರ ಕಲಂ 21ರ ಅನ್ವಯ ಈ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಕೈಗೊಳ್ಳಲಾಗುತ್ತಿದೆ ಎಂದು ಸಭೆಯಲ್ಲಿ ವಿವರಿಸಲಾಯಿತು.

ಅರ್ಹರು ಆನ್‌ಲೈನ್ ಅಥವಾ ಆಫ್‌ಲೈನ್ ಮೂಲಕ ಹೆಸರು ನೋಂದಣಿಗೆ ಅರ್ಜಿ ಸಲ್ಲಿಸಬಹುದು. ಚುನಾವಣಾ ಆಯೋಗದ ಅಧಿಕೃತ ಮತದಾರರ ಸೇವಾ ಪೋರ್ಟಲ್ ತಂತ್ರಜ್ಞಾನ.ಜಛಿ.ಠಿಠಿತಿ, ಇಆಖಓಇಖಿ ಮೊಬೈಲ್ ಅಪ್ಲಿಕೇಶನ್ ಮೂಲಕ ಅಥವಾ ತಮ್ಮ ವ್ಯಾಪ್ತಿಯ ಬೂತ್ ಮಟ್ಟದ ಅಧಿಕಾರಿ,ಸಹಾಯಕ ಮತದಾರರ ನೋಂದಣಾಧಿಕಾರಿ ಹಾಗೂ ಮತದಾರರ ನೋಂದಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಿ ಅಗತ್ಯ ಸೇವೆಗಳನ್ನು ಪಡೆಯಬಹುದು. 30-ಬಿಜಾಪುರ ನಗರ ಮತಕ್ಷೇತ್ರದ ಎಲ್ಲ ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವುದನ್ನು ಖಚಿತಪಡಿಸಿಕೊಳ್ಳುವುದರೊಂದಿಗೆ, ಹೊಸದಾಗಿ ಹೆಸರು ನೋಂದಾಯಿಸಿಕೊಳ್ಳಲು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ವಿಜಯಕುಮಾರ ಮೆಕ್ಕಳಕಿ ಅವರು ತಿಳಿಸಿದರು.

ಸೋಮಜಾಳದಲ್ಲಿ ಎಬಿ ಫೌಂಡೇಶನ್ ಏರ್ಪಡಿಸಿದ ಮ್ಯಾರಥಾನ್ ಸ್ಪರ್ಧೆಗೆ ಚಾಲನೆ ನೀಡಿದ ಪಂಜಾಬಿನ ರಾಷ್ಟ್ರೀಯ ಕ್ರೀಡಾ ತರಬೇತುದಾರ ಅಮರಜೀತ್ ಸಿಂಗ್ ಅಭಿಮತ

ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕ್ರೀಡೆ ತುಂಬಾ ಸಹಕಾರಿ. ಕಾರಣ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಆಟೋಟಗಳಿಗೂ ಪ್ರಾಧಾನ್ಯತೆ ಕೊಡಬೇಕು. ಭವಿಷ್ಯದಲ್ಲಿ ವಿಶ್ವ ಮಟ್ಟದ ಕ್ರೀಡೆಗಳಲ್ಲಿ ಪಾಲ್ಗೊಂಡು ನಮ್ಮ ದೇಶದ ಕೀರ್ತಿ ಪತಾಕೆಯನ್ನು ಎತ್ತಿಹಿಡಿಯಬೇಕೆಂದು ಪಂಜಾಬಿನ ರಾಷ್ಟ್ರೀಯ ಕ್ರೀಡಾ ತರಬೇತುದಾರ ಅಮರಜೀತ್ ಸಿಂಗ್ ಕರೆ ನೀಡಿದರು.

ಜಿಲ್ಲೆಯ ಆಲಮೇಲ ತಾಲ್ಲೂಕಿನ ಸೋಮಜಾಳ ಗ್ರಾಮದಲ್ಲಿ ನ.19 ರಂದು ದಿ.ಆಕಾಶ ಬಿರಾದಾರ ಸ್ಮರಣಾರ್ಥ ಎಬಿ ಫೌಂಡೇಶನ್ ಏರ್ಪಡಿಸಿದ ಮ್ಯಾರಥಾನ್ ಸ್ಪ

ಸಿಂದಗಿ ನಗರದ ತಾಲೂಕು ಆಡಳಿತದೆದುರು ಪ್ರತಿಭಟನೆ । ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆ ಮನವಿ

ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಅನುಷ್ಠಾನಕ್ಕೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಹೊನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯು ಬರಪೀಡಿತ ಪ್ರದೇಶವಾಗಿದ್ದು, ಇಲ್ಲಿನ ಜನರು ಉದ್ಯೋಗ ಹಾಗೂ ಮೂಲಭೂತ ಸೌಕರ್ಯಗಳ ಸಮಸ್ಯೆ ಎದುರಿಸುತ್ತಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಿ ಸ್ಥಳೀಯರಿಗೆ ಉದ್ಯೋಗ ಕಲ್ಪಿಸುವ ಮೂಲಕ ನಿರುದ್ಯೋಗ ಸಮಸ್ಯೆ ನಿವಾರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ತಾಲೂಕು ಅಧ್ಯಕ್ಷ ಬಸವರಾಜ ಎಂ. ರಂಜುಣಗಿ ಆಗ್ರಹಿಸಿದರು.

ಸಿಂದಗಿ ನಗರದ ತಾಲೂಕು ಆಡಳಿತ ಆವರಣದಲ್ಲಿ ಪ್ರತಿಭಟಿಸಿ, ಗ್ರಾಮದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮಾತನಾಡಿದ ಅವರು, ಹೊನ್ನಳ್ಳಿ ಗ್ರಾಮದಲ್ಲಿ ಕುಡಿಯುವ ನೀರು, ರಸ್ತೆ ಹಾಗೂ ಚರಂಡಿ ವ್ಯವಸ್ಥೆ ಸುಧಾರಿಸಬೇಕು. ಒಂದು ವೇಳೆ ಈ ಬೇಡಿಕೆಗಳನ್ನು ಈಡೇರಿಸದಿದ್ದರೆ ಇಡೀ ಗ್ರಾಮದ ಜನರು ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸಿ ಮತದಾನದಿಂದದೂರಉಳಿಯಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.


ಈ ವೇಳೆ ಹೊನ್ನಳ್ಳಿ ರೈತ ಘಟಕದ ಅಧ್ಯಕ್ಷ ಸಂತೋಷ ಶಿರಸಿಗಿ, ಗೋಲಗೇರಿ ವಲಯದ ಉಪಾಧ್ಯಕ್ಷ ಅಂಬರೀಶ ಡಿಗ್ಗಿ ಮಾತನಾಡಿ, ಹೊನ್ನಳ್ಳಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ಇಲ್ಲದಿರುವುದರಿಂದ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೂ ಗ್ರಾಮಸ್ಥರು ಗೋಲಗೇರಿ ಅಥವಾ ಸಿಂದಗಿ ಪಟ್ಟಣದ ಆಸ್ಪತ್ರೆಗಳಿಗೆ ತೆರಳಬೇಕಾದ ಅನಿವಾರ್ಯತೆ ಇದೆ. ಸರಿಯಾದ ರಸ್ತೆ ಸೌಲಭ್ಯವಿಲ್ಲದೆ ದೂರದ ಊರುಗಳಿಗೆ ರೋಗಿಗಳನ್ನು ಕರೆದೊಯ್ಯುವುದು ಕಷ್ಟಕರವಾಗಿದೆ. ಬಡ ಕುಟುಂಬಗಳು ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆಯುವುದರಿಂದ ಆರ್ಥಿಕವಾಗಿ ಹೆಚ್ಚಿನ ಹೊರೆ ಅನುಭವಿಸುತ್ತಿವೆ. ಆದ್ದರಿಂದ ಹೊನ್ನಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಿಸಿ, ಗ್ರಾಮೀಣ ಜನರಿಗೆ ಸ್ಥಳೀಯವಾಗಿಯೇ ಆರೋಗ್ಯ ಸೇವೆ ಒದಗಿಸಬೇಕು. ಇಲ್ಲದಿದ್ದರೆ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವ ನಿರ್ಧಾರಕ್ಕೆ ಗ್ರಾಮಸ್ಥರು ಬಂದಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ನೇತೃತ್ವದಲ್ಲಿ ಗ್ರಾಮಸ್ಥರು ತಹಶೀಲ್ದಾರರಿಗೆ ಮನವಿ ಸಲ್ಲಿಸಿ, ಹೊನ್ನಳ್ಳಿ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಾಣ, ಕುಡಿಯುವ ನೀರು, ರಸ್ತೆ ಹಾಗೂ ಚರಂಡಿ ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವಂತೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಏಕನಾಥ ದ್ಯಾಶಾಳ, ಪರಶು ದೊಡಮನಿ, ರಮೇಶ ಕುದುರಗೊಂಡ, ಮುಖೇಶ ಬಡಿಗೇರ, ಬಸವರಾಜ ಕಟ್ಟಿಮನಿ, ಗೋಲಗೇರಿ ವಲಯ ಅಧ್ಯಕ್ಷ ಶಬ್ಬೀರ್ ನಾಯ್ಕೋಡಿ, ಖಾದರ್ ಭಾಷಾ ಉಸ್ತಾದ, ರಾಜಶೇಖರ ಖ್ಯಾಡ, ಭೀಮರಾಯ ಕ್ಯಾದಿಗೇರಿ, ಪ್ರದೀಪ ಖ್ಯಾಡ, ರಮೇಶ ತಿಪನಟಗಿ, ಅಣ್ಣಪ್ಪ ತಿಪನಟಗಿ, ರಾಜು ಕಂಬಾರ, ಹಣಮಂತ ಛಲವಾದಿ, ರೇವಣಸಿದ್ಧ ರತ್ಯಾಳ, ಆನಂದ ಕೂಡಗಿ, ರಮೇಶ ಬಮ್ಮನಳ್ಳಿ, ರಾಜಶೇಖರ ಶಿರಸಗಿ, ನಬಿರಸೂಲ್ ಬಾಗೇವಾಡಿ ಹಾಗೂ ಭೀಮು ಛಲವಾದಿ, ಬಾಗಣ್ಣ ಅಲ್ಲಾಪೂರ ಸೇರಿದಂತೆ ಗ್ರಾಮಸ್ಥರು ಇದ್ದರು.

ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲು ಆಗ್ರಹ

ಸಿಂದಗಿ ತಾಲೂಕಿನ ಕಟ್ಟಕಡೆಯ ಗ್ರಾಮಗಳಾದ ಹೊನ್ನಳ್ಳಿ ಮತ್ತು ಬ್ರಹ್ಮದೇವನಮಡು ಗ್ರಾಮಗಳ ಜನರು ಸ್ವಾತಂತ್ರ ಬಂದು ಎಂಟು ದಶಕಗಳು ಕಳೆದರೂ ಮೂಲಭೂತ ಸೌಕರ್ಯಗಳ ಕೊರತೆಯನ್ನು ಎದುರಿಸುತ್ತಿದ್ದಾರೆ. ಅದರಲ್ಲೂ ಆರೋಗ್ಯ ಕ್ಷೇತ್ರದಲ್ಲಿ ಗ್ರಾಮಗಳು ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಗ್ರಾಮದಲ್ಲಿ ತಕ್ಷಣವೇ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಗ್ರಾಮಸ್ಥರ ಬಹುದಿನಗಳ ಬೇಡಿಕೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಬೃಹತ್ ಪ್ರಮಾಣದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.



ಚಿರತೆ ಸೆರೆ ಸಿಕ್ಕಿದ್ದಕ್ಕೆ ರೈತರಿಗೆ ಸಮಾಧಾನ । ಪರಿಹಾರಕ್ಕಾಗಿ ಗ್ರಾಮಸ್ಥರ ಪಟ್ಟು । ತಹಶೀಲ್ದಾರ್ ಭರವಸೆ ಬಳಿಕ ಚಿರತೆ ಸ್ಥಳಾಂತರ

ತದ್ದೇವಾಡಿಯಲ್ಲಿ ಕೊನೆಗೂ ಬೋನಿಗೆ ಬಿದ್ದ ಚಿರತೆ!

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ತಾಲೂಕಿನ ತದ್ದೇವಾಡಿ ಗ್ರಾಮದ ಅಡವಿ ವಸ್ತಿ ಪ್ರದೇಶದಲ್ಲಿ ಹಲವು ದಿನಗಳಿಂದ ರೈತರು ಹಾಗೂ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಚಿರತೆ ಕೊನೆಗೂ ಬುಧವಾರ ನಸುಕಿನಲ್ಲಿ ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿಗೆ ಬಿದ್ದಿದೆ. ಚಿರತೆ ಸೆರೆ ಸಿಕ್ಕಿದ್ದರಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದರೂ, ಚಿರತೆ ದಾಳಿಗೆ ಜಾನುವಾರುಗಳನ್ನು ಕಳೆದುಕೊಂಡ ರೈತರಿಗೆ ಈವರೆಗೆ ಪರಿಹಾರ ದೊರೆಯದಿರುವುದು ಅಸಮಾಧಾನಕ್ಕೆ ಕಾರಣವಾಗಿದೆ.

ಬುಧವಾರ ಬೆಳಿಗ್ಗೆ ಒಂದು ಚಿರತೆ ಬೋನಿಗೆ ಬಿದ್ದಿರುವುದನ್ನು ದೃಢಪಡಿಸಿದ ಜೇವೂರ ಸಸ್ಯಪಾಲನಾ ಮತ್ತು ಅರಣ್ಯ ಅಧಿಕಾರಿ ಮಂಜುನಾಥ ಧೂಳೆ, ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಬ್ಬಿನ ಗದ್ದೆಗಳು ಹಾಗೂ ಅರಣ್ಯ ಪ್ರದೇಶ ಹೆಚ್ಚಾಗಿರುವುದರಿಂದ ಇನ್ನೂ ಎಷ್ಟು ಚಿರತೆಗಳಿವೆ ಎಂಬುದು ಖಚಿತವಾಗಿಲ್ಲ. ಹೀಗಾಗಿ ರೈತರು ಹಾಗೂ ಗ್ರಾಮಸ್ಥರು ಆತಂಕಪಡದೆ ಮುನ್ನೆಚ್ಚರಿಕೆ ವಹಿಸಬೇಕು ಮತ್ತು ಜಾಗೃತರಾಗಿರಬೇಕು ಎಂದು ತಿಳಿಸಿದರು.

ವಿಜಯಪುರ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಬಿ. ಕುಶನಾಳ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೆಲ್ವರಾಜ್ ನಾಯ್ಕರ್ ಅವರ ಮಾರ್ಗದರ್ಶನದಲ್ಲಿ ಚಿರತೆ ಸೆರೆಹಿಡಿಯಲು ಬೋನು ಅಳವಡಿಸಲಾಗಿತ್ತು ಎಂದು ಮಂಜುನಾಥ ಧೂಳೆ ಮಾಹಿತಿ ನೀಡಿದರು.

ಕಳೆದ ವರ್ಷದ ಬಳಿಕ ಮತ್ತೆ ಚಿರತೆ ಕಾಟ!

ತದ್ದೇವಾಡಿ ಗ್ರಾಮದ ಅಡವಿ ವಸ್ತಿ ಪ್ರದೇಶದಲ್ಲಿ ಚಿರತೆ ಕಾಣಿಸಿಕೊಂಡು ರೈತರು ಹಾಗೂ ಗ್ರಾಮಸ್ಥರಲ್ಲಿ ಭೀತಿ ಮೂಡಿಸಿತ್ತು. ಕಳೆದ ವರ್ಷವೂ ಇದೇ ಭಾಗದಲ್ಲಿ ಚಿರತೆ ಕಾಣಿಸಿಕೊಂಡಾಗ ಸ್ಥಳೀಯ ಗೊಲ್ಲರು ತಮ್ಮ ಪ್ರಾಣದ ಹಂಗು ತೊರೆದು ಸಾಹಸದಿಂದ ಚಿರತೆಯನ್ನು ಹಿಡಿದು ಅರಣ್ಯ ಇಲಾಖೆಗೆ ಒಪ್ಪಿಸಿದ್ದರು. ಇದೀಗ ಮತ್ತೆ ಚಿರತೆ ದಾಳಿ ನಡೆಸಿ ಜಾನುವಾರುಗಳನ್ನು ಬಲಿ ಪಡೆದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಕಾರ್ಯಾಚರಣೆ ಚುರುಕುಗೊಳಿಸಿತ್ತು.

ವಿಜಯಪುರ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿ ಎಂ.ಬಿ. ಕುಶನಾಳ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸೆಲ್ವರಾಜ್ ನಾಯ್ಕರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಕಾರ್ಯಾಚರಣೆಗೆ ಮಾರ್ಗದರ್ಶನ ನೀಡಿದ್ದರು. ಚಡಚಣ ತಾಲೂಕಿನಲ್ಲಿ ಲಭ್ಯವಿದ್ದ ಒಂದು ಬೋನ್ ಜತೆಗೆ ಸಿಂದಗಿ ಹಾಗೂ ವಿಜಯಪುರದಿಂದ ಹೆಚ್ಚುವರಿಯಾಗಿ ಎರಡು ಬೋನ್‌ಗಳನ್ನು ತರಿಸಿ ಒಟ್ಟು ಮೂರು ಬೋನ್‌ಗಳನ್ನು ಅಳವಡಿಸಲಾಗಿತ್ತು. ಚಿರತೆಯ ಚಲನವಲನ ಪತ್ತೆಹಚ್ಚಲು ಎರಡು ಡ್ರೋನ್‌ಗಳ ಮೂಲಕ ಹುಡುಕಾಟ ನಡೆಸುವುದರ ಜತೆಗೆ ಕ್ಯಾಮೆರಾ ಟ್ರ್ಯಾಪ್ ವ್ಯವಸ್ಥೆಯನ್ನೂ ಅಳವಡಿಸಲಾಗಿತ್ತು.

ಚಿರತೆ ಸೆರೆ ಸಿಕ್ಕಿರುವುದು ಗ್ರಾಮಸ್ಥರಿಗೆ ತಾತ್ಕಾಲಿಕ ನೆಮ್ಮದಿ ನೀಡಿದ್ದರೂ, ಜಾನುವಾರು ಕಳೆದುಕೊಂಡ ರೈತರಿಗೆ ಪರಿಹಾರ ಸಿಗುವವರೆಗೂ ಅವರ ಸಂಕಷ್ಟ ದೂರವಾಗದು. ಅಧಿಕಾರಿಗಳು ನೀಡಿದ ಭರವಸೆ ಕಾರ್ಯರೂಪಕ್ಕೆ ಬಂದು ರೈತರ ಕೈಗೆ ಪರಿಹಾರ ತಲುಪುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

ಈ ಸಂದರ್ಭದಲ್ಲಿ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಮಂಜುನಾಥ ಧೂಳೆ, ಚಡಚಣ ತಹಶೀಲ್ದಾರ್ ಎಸ್.ಎ. ಇಂಗಳೆ, ಚಡಚಣ ಪಿಎಸ್ ಮಂಜುನಾಥ ತಿರಕನ್ನವರ, ಪೊಲೀಸ್ ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿಗಳಾದ ಎಚ್.ಕೆ. ಮಳ್ಳಿ, ಹಣಮಂತ ಲೋಣಿ, ಯಲ್ಲಪ್ಪ, ಸಿಂಧಖೇಡ, ಪ್ರವೀಣ ಹಜ್ಜಾಳಕರ, ರೈತ ಮುಖಂಡ ನಾಗನಾಥಗೌಡ ಬಿರಾದಾರ ಸೇರಿದಂತೆ ರೈತರು ಉಪಸ್ಥಿತರಿದ್ದರು.

ಪರಿಹಾರ ನೀಡುವವರೆಗೂ ಚಿರತೆ ಬಿಡುವುದಿಲ್ಲವೆಂದು ಪಟ್ಟು

ಚಿರತೆ ಸೆರೆ ಸಿಕ್ಕಿದ ಬಳಿಕ ಅದನ್ನು ಬೇರೆಡೆಗೆ ಸ್ಥಳಾಂತರಿಸುವ ಸಂದರ್ಭದಲ್ಲಿ ರೈತ ಮುಖಂಡ ನಾಗನಾಥಗೌಡ ಬಿರಾದಾರ ಹಾಗೂ ರೈತರು ಅರಣ್ಯ ಇಲಾಖೆಯ ಮುಂದೆ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಚಿರತೆ ದಾಳಿಯಿಂದ ಹಲವು ಜಾನುವಾರುಗಳನ್ನು ಕಳೆದುಕೊಂಡಿದ್ದರೂ ಈವರೆಗೆ ಮಾಲೀಕರಿಗೆ ಯಾವುದೇ ಪರಿಹಾರ ದೊರೆತಿಲ್ಲ. ಹೀಗಾಗಿ ನಾಗಠಾಣ ಶಾಸಕ ವಿಠ್ಠಲ ಕಟಕಧೋಂಡ ಅವರು ಸ್ಥಳಕ್ಕೆ ಆಗಮಿಸಿ, ಜಾನುವಾರು ಕಳೆದುಕೊಂಡ ರೈತರಿಗೆ ನಿಯಮಾನುಸಾರ ಪರಿಹಾರ ಕೊಡಿಸುವ ಭರವಸೆ ನೀಡಬೇಕು. ಅಲ್ಲಿಯವರೆಗೆ ಸೆರೆ ಸಿಕ್ಕ ಚಿರತೆಯನ್ನು ಸ್ಥಳಾಂತರಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದರು.

ನಂತರ ಸ್ಥಳಕ್ಕೆ ಆಗಮಿಸಿದ ಚಡಚಣ ತಹಶೀಲ್ದಾರ್ ಸಂಜಯ ಇಂಗಳೆ ಅವರು ರೈತ ಮುಖಂಡ ನಾಗನಾಥಗೌಡ ಬಿರಾದಾರ ಹಾಗೂ ರೈತರೊಂದಿಗೆ ಚರ್ಚಿಸಿ, ಚಿರತೆ ದಾಳಿಗೆ ಜಾನುವಾರು ಕಳೆದುಕೊಂಡ ಮಾಲೀಕರಿಗೆ ಶೀಘ್ರದಲ್ಲೇ ನಿಯಮಾನುಸಾರ ಪರಿಹಾರ ಕೊಡಿಸಲು ಕ್ರಮ ಕೈಗೊಳ್ಳುವ ಭರವಸೆ ನೀಡಿದರು. ತಹಶೀಲ್ದಾರರ ಭರವಸೆಯ ನಂತರ ಸೆರೆ ಸಿಕ್ಕ ಚಿರತೆಯನ್ನು ಸುರಕ್ಷಿತವಾಗಿ ಬೇರೆಡೆಗೆ ಸ್ಥಳಾಂತರಿಸಲಾಯಿತು.



ಜೀವನ ಸಫಲತೆಗೆ ಶಿಕ್ಷಣ ಜ್ಞಾನ ಅಗತ್ಯ :ಕೋಟ್ಯಾಳ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳು ಜ್ಞಾನ ದಾಹಿಗಳಾಗಬೇಕು. ವಿದ್ಯಾ ಸಂಪನ್ನರಾದಾಗ ಮಾತ್ರ ವ್ಯಕ್ತಿತ್ವ ವಿಕಸನವಾಗುವುದು. ವಿದ್ಯೆ ಬಲದಿಂದಲೇ ನಿಮ್ಮಯ ಜೀವನ ಪಾವನ ಎಂದು ಮುಖ್ಯೋಪಾಧ್ಯಾಯ ಜಿ.ಎಂ. ಕೋಟ್ಯಾಳ ಮಕ್ಕಳ ಸಮೂಹಕ್ಕೆ ಹೇಳಿದರು.

ಜಿಲ್ಲೆಯ ಆಲಮಟ್ಟಿ ಎಸ್.ವಿ.ವಿ.ಸಂಸ್ಥೆಯ ಆರ್.ಬಿ.ಪಿ.ಜಿ.ಹಳಕಟ್ಟಿ ಪ್ರೌಢಶಾಲೆಯಲ್ಲಿ ಜವಾಹರಲಾಲ್ ನೆಹರು ಜನ್ಮದಿನದಂದು ಹಮ್ಮಿಕೊಂಡಿದ್ದ ಮಕ್ಕಳ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯೆ ಕಲಿಕೆಯಿಂದ ಜೀವನದ ರೂಪ ಬದಲಾಗುತ್ತದೆ. ಇಂದು ಶಿಕ್ಷಣದ ವಿದ್ಯೆ ಇಲ್ಲದವರಿಗೆ ಅನಕ್ಷರಸ್ಥ ಪಟ್ಟ ತಟ್ಟುತ್ತಿದೆ. ಅವಿದ್ಯಾವಂತರೆಂಬ ಮುದ್ರೆ ಅಚ್ಚಾಗುತ್ತಿದೆ. ಆ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಕಲಿಕಾ ಸಮಯದಲ್ಲಿ ನಿದ್ದೆ ಗೆಟ್ಟು ವಿದ್ಯೆ ಗಳಿಸಿ ವಿದ್ಯಾ ಸಂಪನ್ನರಾಗಿ ಹೊರಹೊಮ್ಮಬೇಕೆಂದರು.

ಚಿತ್ರಕಲಾ ಶಿಕ್ಷಕ ಗುಲಾಬಚಂದ ಜಾಧವ ಮಾತನಾಡಿ, ಕಲಿಕೆಯ ಬೇರುಗಳು ಬಾಳಿಗೆ ಬೆಳಕು ಹರಿಸುತ್ತವೆ. ಮೌಲ್ಯಧಾರೆ ಜಿನುಗುಸುತ್ತವೆ. ಗುಣಮಟ್ಟದ ಶಿಕ್ಷಣದಿಂದಲೇ ನೈಜತೆಯ ಪ್ರಗತಿ. ಇದನ್ನು ಪ್ರತಿಯೊಬ್ಬರು ಅರಿತುಕೊಂಡು ಮುನ್ನಡೆಯಬೇಕು ಎಂದರು.

ಕಾಲಘಟ್ಟಕ್ಕೆತಕ್ಕಂತೆಜ್ಞಾನಮಟ್ಟಮಕ್ಕಳಲ್ಲಿಉನ್ನತೀಕರಣವಾಗಬೇಕು. ಜ್ಞಾನದ ಮೇಲೆಯೇ ಎಲ್ಲವೂ ನಿಂತಿದೆ.ಹೀಗಾಗಿ ಪಠ್ಯದಾಚೆಯ ಜ್ಞಾನ ತಿರುಳವೂ ಅರಿವಂತಾಗಬೇಕು. ಸೂಕ್ಷ್ಮ ಬುದ್ಧಿಮತ್ತೆಯೊಂದಿಗೆ ಉತ್ಕಟ ಗ್ರಹಿಕಾಶಕ್ತಿ ವಿಸ್ತರಿಸಿಕೊಳ್ಳಬೇಕು. ಅಚಲತೆಯ ಆತ್ಮವಿಶ್ವಾಸ ಬೆಳೆಸಿಕೊಂಡು ಶೈಕ್ಷಣಿಕ ಜೀವನ ಪಥ ಸಾರ್ಥಕ ಪಡಿಸಿಕೊಳ್ಳಬೇಕು ಎಂದು ಮಕ್ಕಳಿಗೆ ಹಿತನುಡಿದರು.

ಹಿಂದಿ ಶಿಕ್ಷಕ ಎಂ.ಬಿ.ದಶವಂತ ಮಾತನಾಡಿ, ಮಕ್ಕಳು ಆಚಾರ,ವಿಚಾರವಂತರಾಗಿಬೇಕು. ಶಿಕ್ಷಣಕ್ಕೆ ಒಲವು ತೋರಬೇಕು.ಶಿಕ್ಷಣವೆಂಬುದು ಸಾಧನದ ಬಿಂಬು. ಆ ಬಿಂಬಿನಲ್ಲಿ ಕಲಿಕಾ ಪರಾಕಾಷ್ಠೆ, ನಯ, ವಿನಯ, ನಡೆ,ನುಡಿ ಸದಾಚಾರ ಮನೋಭಾವದ ಪ್ರತಿಬಿಂಬ ಕಾಣುವಂತೆ ಚೈತನ್ಯಶೀಲರಾಗಿ ಮಿನುಗಬೇಕು. ವಿದ್ಯಾರ್ಥಿಗಳು ವಿದ್ಯಾವಂತರಾಗಿ, ಸುಸಂಸ್ಕೃತ ನಾಗರಿಕರಾಗಿ ಸಮಾಜದಲ್ಲಿ ತಮ್ಮದೇ ವ್ಯಕ್ತಿತ್ವ ಚಹರೆ ಮೂಡಿಸಬೇಕು ಎಂದರು.

ಮಕ್ಕಳೇ ಕಾರ್ಯಕ್ರಮದ ಎಲ್ಲ ಹಂತಗಳನ್ನು ನಿರೂಪಿಸಿದರು. ಅಲ್ಲದೇ ವೇದಿಕೆ ಮೇಲೆ ಅಧ್ಯಕ್ಷರಾಗಿ, ಮುಖ್ಯ ಅತಿಥಿಗಳಾಗಿ ಕಾಣಿಸಿಕೊಂಡರು. ಶಾಲಾ ಪ್ರಧಾನ ಮಂತ್ರಿ ರಮೇಶ್ ಗಣಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಲಾ ಸಂಸತ್ತಿನ ಮಹಿಳಾ ಪ್ರತಿನಿಧಿ ಶ್ರುತಿ ಲಮಾಣಿ, ಮಂತ್ರಿಮಂಡಲ ಸದಸ್ಯರಾದ ಶ್ರೀನಿವಾಸ ವಡ್ಡರ, ಅಖಂಡೇಶ ಬಂಡಿವಡ್ಡರ, ಸಾಕೀಬ ಒಂಟಿ, ಪ್ರಜ್ವಲ ಮಾದರ, ಮುತ್ತವ ಮಾದರ, ಉಜ್ವಲಾ ಮಹೇಂದ್ರಕರ, ವಿಜಯಲಕ್ಷ್ಮೀ ಸೌಧಿ, ಕೋಮಲ ಲಮಾಣಿ, ತುವರ್ಣ ರಾಠೋಡ, ತನ್ವಿ ಲಮಾಣಿ, ಮಂಜುಳಾ ತೆಲಗಿ, ಸಾವಿತ್ರಿ ಹಿರೇಮಠ, ಐಶ್ವರ್ಯ ಅಂಗಡಿ, ಕೃತಿಕಾ ಬಂಡಿವಡ್ಡರ, ಪ್ರೀತಿ ಲಮಾಣಿ, ಸಾವಿತ್ರಿ ಮಾದರ, ಕಸ್ತೂರಿ ಭಾವಿಕಟ್ಟಿ, ವಿನಾಯಕ ಮಹೇಂದ್ರಕರ, ವರುಣ ಇಲ್ಯಾಳ, ರಾಮು ವಡ್ಡರ,ಕೃಷ್ಣಾ ರತ್ನಾಕರ ಇತರರು ಅತಿಥಿಗಳಾಗಿ ವೇದಿಕೆ ಅಲಂಕರಿಸಿದರು. ಗುರು–ಶಿಷ್ಯರು ನೆಹರೂ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಗೌರವ ನಮನ ಅಪಿ9ಸಿದರು.

ಸಾವಿತ್ರಿ ಮಾದರ ಸ್ವಾಗತಿಸಿದರು. ನಾಗರಾಜ ಬೊಂಬಲೇಕರ, ಜೀವನ ಕಾರಬಾರಿ ನಿರೂಪಿಸಿದರು. ಮಂಜುಳಾ ತೆಲಗಿ ಪ್ರಶಸ್ತಿ ಬಹುಮಾನ ನಡೆಸಿಕೊಟ್ಟಳು. ಪ್ರೀತಿ ಲಮಾಣಿ ವಂದಿಸಿದಳು.

ಚರ್ಚಾಕೂಟ ವಿಭಾಗದಿಂದ ಆಂಗ್ಲ ಭಾಷಾ ಶಿಕ್ಷಕ ರಾಜಕುಮಾರ ರಾಠೋಡ ಸಹಪಾಠಿಗಳೊಂದಿಗೆ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಸಿಕೊಟ್ಟರು. ಶಿಕ್ಷಕ ಎನ್.ಎಸ್.ಬಿರಾದಾರ, ಶ್ರೀಧರ ಚಿಮ್ಮಲಗಿ, ಶ್ರೀಮತಿ ಸಾವಿತ್ರಿ ಸಜ್ಜನ, ಶಾಲಾಹಿತೈಷಿ ಸಿದ್ದು ಪಟ್ಟಣಶೆಟ್ಟಿ ಇತರರಿದ್ದರು. ಅಡುಗೆ ಮಾತೆಯರಾದ ವಿದ್ಯಾ ಮಹೇಂದ್ರಕರ, ರೇಣುಕಾ ಶಿವಣಗಿ ರುಚಿ ಶುಚಿ ಘಮದ ಫಲಾವವನ್ನು ಸಿಹಿ ಜಿಲೆಬಿಯೊಂದಿಗೆ ಮಕ್ಕಳಿಗೆ ಬಡಿಸಿ ಅಕ್ಷರ ದಾಸೋಹದ ಸವಿಯೂಣಿಸಿದರು.

ವಿಜಯಪುರದಲ್ಲಿ ನಡೆದ ಜಿಲ್ಲಾಮಟ್ಟದ ಕಲಾಪ್ರತಿಭೋತ್ಸವ । ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಿಗೆ ಹಾಗೂ ಕಲಾವಿದರಿಗೆ ಸನ್ಮಾನ

ಮಕ್ಕಳ ಸುಪ್ತ ಪ್ರತಿಭೆ ಗುರುತಿಸಿ ಪೋಷಿಸಿ :ಡಾ.ಸಂಬಣ್ಣಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಕ್ಕಳಲ್ಲಿನ ಸುಪ್ತ ಪ್ರತಿಭೆಯನ್ನು ಗುರುತಿಸಿ, ಪೋಷಿಸುವುದರೊಂದಿಗೆ ಅವರಿಗೆ ಸೂಕ್ತ ಪ್ರೋತ್ಸಾಹ ಹಾಗೂ ಅವಕಾಶಗಳನ್ನು ಕಲ್ಪಿಸಬೇಕು. ಮಕ್ಕಳು ಕಲೆಯಲ್ಲಿ ಅರಳಿ, ತಮ್ಮ ಪ್ರತಿಭೆಯ ಮೂಲಕ ಕಲಾಜಗತ್ತಿನಲ್ಲಿ ಗುರುತಿಸಿಕೊಳ್ಳುವ ಆಶಯದೊಂದಿಗೆ ಮುನ್ನಡೆಯಬೇಕು ಎಂದು ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಗಂಗಾಧರ ಎಸ್. ಸಂಬಣ್ಣಿ ಕರೆ ನೀಡಿದರು.

ನಗರದಕಂದಗಲ್‌ಶ್ರೀಹ

ಉಳಿತಾಯವು ತಿನ್ನುವ ಆಹಾರದಷ್ಟೇ ಅವಶ್ಯಕ



ಸಂತೋಷ್ ರಾವ್ ಪೆರ್ಮುಡ
ಪಟ್ರಮೆ ಗ್ರಾಮ ಮತ್ತು ಅಂಚೆ
ಬೆಳ್ತಂಗಡಿ ತಾಲೂಕು – ದ.ಕ
ಫೋ:9742884160

■ ಉದಯರಶ್ಮಿ ದಿನಪತ್ರಿಕೆ

ಮನುಷ್ಯರಾದ ನಾವು ಜೀವನೋಪಾಯಕ್ಕಾಗಿ ಯಾವುದೇ ಉದ್ಯೋಗವನ್ನು ಕೈಗೊಂಡರೂ ಅದರ ಹಿಂದಿರುವ ನಗ್ನ ಸತ್ಯ ಅದು 'ಹೊಟ್ಟೆಗಾಗಿ ಮತ್ತು ಗೇಣು ಬಟ್ಟೆಗಾಗಿ'ಯೇ ಎಂದು ದಾಸರುಗಳು ಹೇಳಿದ್ದಾರೆ. ಆ ಮಾತು ಸಾರ್ವತ್ರಿಕ ಸತ್ಯವೂ ಹೌದೆನ್ನಬಹುದು.

ಮನುಷ್ಯ ತಾನು ದುಡಿದದ್ದೆಲ್ಲ ತನ್ನ ಗೇಣುದ್ದದ ಹೊಟ್ಟೆಗಾಗಿ ಎಂದು ತನ್ನ ದುಡಿತದ ಅವಧಿಯಲ್ಲಿ ದುಡಿದ ಮೊತ್ತವನ್ನೆಲ್ಲಾ ಸಂಪೂರ್ಣವಾಗಿ ಖರ್ಚು ಮಾಡುತ್ತಾ ಹೋದರೆ ಪರಿಸ್ಥಿತಿ ಹೇಗಿರಬಹುದು ಎಂದು ಒಂದು ಕ್ಷಣ ಯೋಚಿಸುವುದು ಉತ್ತಮ. ದುಡಿಮೆ ಮಾಡದೇ ಇರುವವರು ಯಾರೂ ಇರಲಾರರೆಂದು ಹೇಳಬಹುದಾಗಿದ್ದು, ಆದರೆ ದುಡಿದು ಆದಾಯ ಗಳಿಸುವ ವಿಧಾನಗಳು ಮಾತ್ರ ಬೇರೆ ಬೇರೆ ಇರಬಹುದಷ್ಟೇ. ಸಾಮಾನ್ಯವಾಗಿ ಮನುಷ್ಯನ ದೇಹ ಮತ್ತು ಮನಸ್ಸು ನಿರಂತರವಾಗಿ ಎಲ್ಲಾ ವಯಸ್ಸಿನಲ್ಲಿಯೂ ದುಡಿಯಲು ಏಕ ಪ್ರಕಾರವಾಗಿ ಸಹಕರಿಸುವುದಿಲ್ಲ. ಹಾಗಾಗಿ ಯೌವನದಲ್ಲಿ ದುಡಿದ ಮೊತ್ತದ ಒಂದು ಪಾಲನ್ನು ಮುಪ್ಪಿನಲ್ಲಿ ಬಳಸಿಕೊಳ್ಳುವಂತಾಗಬೇಕೆಂದರೆ ದುಡಿಯುತ್ತಿರುವಾಗಲೇ ನಿರಂತರವಾಗಿ ನಿರ್ದಿಷ್ಟ ಮೊತ್ತದ ಉಳಿತಾಯವನ್ನು ಪ್ರಾರಂಭಿಸಲೇಬೇಕು. ಇಲ್ಲವೆಂದಾದಲ್ಲಿ 'ಯುದ್ಧಕಾಲೇ ಶಸ್ತ್ರಾಭ್ಯಾಸ' ಎಂಬಂತಾಗಿ ಯಾವ ಶಸ್ತ್ರವನ್ನು ಯಾವಾಗ ಮತ್ತು ಹೇಗೆ ಬಳಸಬೇಕೆಂದೂ ಅರಿಯದೆ ಯುದ್ಧದಲ್ಲಿ ಅಂದರೆ ಬದುಕಲ್ಲಿ ಸೋಲುವ ಪ್ರಮೇಯ ಒದಗಿಬರಬಹುದು.

ನಾವುಗಳು ದುಡಿಯುವ ದಿನಗಳಲ್ಲಿ ದುಡಿದ ಸಂಪಾದನೆಯನ್ನು ಅಲ್ಲಿಂದಲ್ಲಿಗೇ ಖರ್ಚು ಮಾಡುತ್ತಾ ಹೋದರೆ ಮುಂದೊಂದು ದಿನ 'ಸಂಕಟ ಬಂದಾಗ ವೆಂಕಟರಮಣ' ಎಂಬಂತಾಗಬಹುದು. ಅಂದರೆ ಕಷ್ಟಗಳು ಬಂದಾಗ ಅಥವಾ ಮುಪ್ಪಿನ ಅವಧಿಯಲ್ಲಿ ಕಂಡವರ ಬಳಿ ಹಣ–ಕ್ಕಾಗಿ ಸಹಾಯ ಹಸ್ತವನ್ನು ಚಾಚಬೇಕಾಗುತ್ತದೆ. ಹಾಗಾಗಿ ಮನುಷ್ಯನಿಗೆ ಬದುಕಲು ಆಹಾರ ಎಷ್ಟು ಪ್ರಮುಖವೋ ಹಾಗೆಯೇ ಉಳಿತಾಯವೂ ಕೂಡಾ ಅಷ್ಟೇ ಪ್ರಾಮುಖ್ಯವಾಗಬೇಕು. ಈ ಕಾರಣಕ್ಕಾಗಿಯೇ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಉಳಿತಾಯವನ್ನು ಪರ್ಯಾಯವಾದ ಬಂಡವಾಳಕ್ಕೆ ಸಮಾನವೆಂದು ಬಣ್ಣಿಸಿದ್ದಾರೆ. ಒಂದು ಬಾರಿ ಆಳವಾಗಿ ಯೋಚಿಸಿ ನೋಡಿದರೆ ನಾವು ಇಂದು ಉಳಿಸುವ ಒಂದು ರೂಪಾಯಿಯೂ ಕೂಡಾ ಭವಿಷ್ಯದ ಬಂಡವಾಳವಾಗಿ ಬಳಕೆಯಾಗುತ್ತದೆ. ಅಂ–ದರೆ ಯಾವುದಾದರೊಂದು ಸದುದ್ದೇಶಕ್ಕೆ ಆ ಮೊತ್ತ ನೇರ ಬಂಡವಾಳವಾಗಿ ಪರಿವರ್ತನೆಯಾಗುತ್ತದೆ. ಮನುಷ್ಯ ಜೀವಿತದಲ್ಲಿ ಎಷ್ಟು ಗಳಿಸುತ್ತಾನೆ ಅಥವಾ ಸಂಪಾದಿಸುತ್ತಾನೆ ಎನ್ನುವುದು ಮುಖ್ಯವಲ್ಲ, ಬದಲಾಗಿ ಆ ಸಮಪಾದನೆಯಲ್ಲಿ ಎಷ್ಟು ಮೊತ್ತವನ್ನು ಭವಿಷ್ಯಕ್ಕಾಗಿ ಉಳಿಸಿ ಕೂಡಿಡುತ್ತಾನೆ ಎನ್ನುವುದು ಮುಖ್ಯವಾದ ಅಂಶ. ಆದ್ದರಿಂದ ಇಂದಿನಿಂದಲೇ, ಈ ಕ್ಷಣದಿಂದಲೇ ಗಳಿಸಿದ ಮೊತ್ತದಲ್ಲಿ ಒಂದು ಪಾಲನ್ನು ಭವಿಷ್ಯಕ್ಕಾಗಿ ಉಳಿಸಿ ಕೂಡಿಡುವ ಪ್ರಕ್ರಿಯೆಯನ್ನು ಪ್ರಾರಂಭಿಸಿ.

ಒಂದು ಬಾರಿ ಆಳವಾಗಿ ಯೋಚಿಸಿ ನೋಡಿದರೆ ನಾವು ಇಂದು ಉಳಿಸುವ ಒಂದು ರೂಪಾಯಿಯೂ ಕೂಡಾ ಭವಿಷ್ಯದ ಬಂಡವಾಳವಾಗಿ ಬಳಕೆಯಾಗುತ್ತದೆ. ಅಂದರೆ ಯಾವುದಾದರೊಂದು ಸದುದ್ದೇಶಕ್ಕೆ ಆ ಮೊತ್ತ ನೇರ ಬಂಡವಾಳವಾಗಿ ಪರಿವರ್ತನೆಯಾಗುತ್ತದೆ. ಮನುಷ್ಯ ಜೀವಿತದಲ್ಲಿ ಎಷ್ಟು ಗಳಿಸುತ್ತಾನೆ ಅಥವಾ ಸಂಪಾದಿಸುತ್ತಾನೆ ಎನ್ನುವುದು ಮುಖ್ಯವಲ್ಲ, ಬದಲಾಗಿ ಆ ಸಂಪಾದನೆಯಲ್ಲಿ ಎಷ್ಟು ಮೊತ್ತವನ್ನು ಭವಿಷ್ಯಕ್ಕಾಗಿ ಉಳಿಸಿ ಕೂಡಿಡುತ್ತಾನೆ ಎನ್ನುವುದು ಮುಖ್ಯವಾದ ಅಂಶ. ಆದ್ದರಿಂದ ಇಂದಿನಿಂದಲೇ, ಈ ಕ್ಷಣದಿಂದಲೇ ಗಳಿಸಿದ ಮೊತ್ತದಲ್ಲಿ ಒಂದು ಪಾಲನ್ನು ಭವಿಷ್ಯಕ್ಕಾಗಿ ಉಳಿಸಿ.





ಉಳಿತಾಯಕ್ಕೆ ಹಲವು ಸರಳ ಮಾರ್ಗಗಳು
ವ್ಯರ್ಥ ದುಂದು ವೆಚ್ಚಗಳಿಗೆ ಕಡಿವಾಣ ಹಾಕುವುದು

ಮನೆ ದಿನ ಬಳಕೆಯ ವಸ್ತುಗಳನ್ನು ಖರೀದಿಸುವಾಗ ಪೂರ್ವ ಸಿದ್ಧತೆಯೊಂದಿಗೆ ಮಾರುಕಟ್ಟೆಗೆ ಹೊರಡುವುದು ಉತ್ತಮ. ಇಲ್ಲವಾದಲ್ಲಿ ನೇರವಾಗಿ ಮಾರುಕಟ್ಟೆಗೆ ಹೋಗಿ ಅಲ್ಲಿನ ಮಹಲುಗಳಲ್ಲಿ ಅಂದವಾಗಿ ಜೊಡಿಸಿಟ್ಟಿರುವ ಆಕರ್ಷಕ ವಸ್ತುಗಳನ್ನು ಕಂಡಾಗ ಅಲ್ಲಿರುವ ವಸ್ತುಗಳು ನಮಗೆ ಅವಶ್ಯವಿಲ್ಲದಿದರೂ ಕಣ್ಣಿನ ಆಕರ್ಷಣೆಗೆ ಒಳಗಾಗಿ ಕಂಡದ್ದನ್ನೆಲ್ಲ ಖರೀದಿ ಮಾಡಬೇಕೆಂಬ 'ಕೊಳ್ಳುಬಾಕ ಸಂಸ್ಕೃತಿ' ಖಂಡಿತವಾಗಿಯೂ ಬೇಡ. ಆನ್ ಲೈನ್ ಖರೀದಿ ಮಾಡಬೇಕೆಂಬ ವ್ಯಾಮೋಹದ ಹೆಸರಲ್ಲಿ ಅನಾವಶ್ಯಕ ಖರ್ಚು ಕೂಡಾ ಒಳ್ಳೆಯದಲ್ಲ ಹಾಗೂ ಹಣಕಾಸಿನ ವಿಚಾರದಲ್ಲಿ ಈ ವ್ಯವಸ್ಥೆಯು ತುಂಬಾ ದುಬಾರಿ ಎಂದೇ ಹೇಳಬಹುದು. ಕುಟುಂಬದ ಸದಸ್ಯರ ಜತೆಯಲ್ಲಿ ಮೋಜಿನ ಪಾರ್ಟಿಯನ್ನು ಮಾಡಬೇಕೆಂದೆನಿಸಿದರೆ ಮನೆಯಲ್ಲಿಯೇ ವೈವಿಧ್ಯಮಯ ಖಾದ್ಯಗಳನ್ನು ತಯಾ–ರಿಸಿದಲ್ಲಿ ಖರ್ಚನ್ನು ಕಡಿಮೆ ಮಾಡುವುದರೊಂದಿಗೆ ಆರೋಗ್ಯಕ್ಕೂ ಉತ್ತಮವಾಗಬಲ್ಲುದು. ಇದರಿಂದಾಗಿ ಕುಟುಂಬದ ಖಾಸಗಿತನವನ್ನೂ ಕಾಪಾಡುವುದರೊಂದಿಗೆ ಕುಟುಂದ ಸದಸ್ಯರೊಂದಿಗೆ ಉತ್ತಮ ಬಾಂಧವ್ಯವನ್ನೂ ಗಟ್ಟಿಗೊಳಿಸಿಕೊಳ್ಳಬಹುದು.

ಖರೀದಿಯಲ್ಲಿ ಹೋಲ್‌ಸೆಲ್ ಖರೀದಿಗೆ ಆದ್ಯತೆಯನ್ನು ನೀಡಿರಿ

ಕುಟುಂಬದ ದಿನನಿತ್ಯದ ಬಳಕೆಗೆ ಅವಶ್ಯವಿರುವ ದಿನ ಬಳಕೆಯ ವಸ್ತುಗಳನ್ನು (ತರಕಾರಿ, ಹಾಲು, ಮೊಸರು ಮುಂತಾದ ಅಲ್ಪಾಯುಷಿ ವಸ್ತುಗಳನ್ನು ಹೊರತುಪಡಿಸಿ) ಖರೀದಿಸುವಾಗ ಆದಷ್ಟು ಹೊಲ್‌ಸೆಲ್ ಖರೀದಿಗೆ ಪ್ರಾಶಸ್ತ್ಯವನ್ನು ನೀಡುವುದು ಉತ್ತಮ. ಏಕೆಂದರೆ ಹೋಲ್‌ಸೆಲ್‌ನಲ್ಲಿ ಹೆಚ್ಚು ವಸ್ತುಗಳನ್ನು ಖರೀದಿಸುವುದರಿಂದ ವಸ್ತುವು ಕಡಿಮೆ ಬೆಲೆಗೆ ದೊರೆಯುತ್ತದೆ. ಹಾಗೂ ಖರೀದಿಸಿದ ಹೆಚ್ಚುವರಿ ವಸ್ತುವು ಮುಂದಿನ ದಿನದಲ್ಲಿ ಬಳಕೆಗೆ ಬೇಕಾಗುವ ವಸ್ತುವೇ ಆಗಿದ್ದು, ದಿನ ಬಳಕೆಯ ವಸ್ತು ಖರೀದಿಗೆ ವ್ಯಯ ಮಾಡುವ ಅವಧಿ ಮತ್ತು ಪ್ರಯಾಣ ವೆಚ್ಚವನ್ನು ಪರಿಣಾಮಕಾರಿಯಾಗಿ ಉಳಿಸಬಹುದಾಗಿದೆ.

ಕುಟುಂಬದ ಜೊತೆಯಲ್ಲಿ ಪ್ರಯಾಣಿಸುವ ಸಂದರ್ಭ ತಿಂಡಿಯ ವ್ಯವಸ್ಥೆ ಮಾಡಿಕೊಳ್ಳಿ ಬಸ್/ರೈಲು ಅಥವಾ ಇನ್ನಿತರ ವಾಹನಗಳಲ್ಲಿ ದೂರದೂರಿಗೆ ಕುಟುಂಬದ ಸದಸ್ಯರೊಂದಿಗೆ ಪ್ರಯಾಣಿಸುವ ಸಂದರ್ಭವಿದ್ದಲ್ಲಿ ತಂಗುದಾಣದಲ್ಲಿ ಅಥವಾ ಮಾರ್ಗ ಮಧ್ಯದಲ್ಲಿ ಹೋಟೇಲ್‌ಗಳಿಗೆ ತಿಂಡಿ ತಿನ್ನಲು ಹೋದರೆ ಖರ್ಚು ಅಧಿಕವಾಗುವ ಸಾಧ್ಯತೆಗಳೇ ಹೆಚ್ಚು. ಅಂತಹ ವ್ಯರ್ಥ ಖರ್ಚಿಗೆ ಕಡಿವಾಣ ಹಾಕುವ ಸಲುವಾಗಿ ಕುಟುಂಬದ ಜತೆ ಪ್ರಯಾಣದ ಸಂದರ್ಭದಲ್ಲಿ ಮನೆಯಲ್ಲೇ ಅವಶ್ಯವಿರುವ ತಿಂಡಿ ತಿನಸುಗಳನ್ನು ತಯಾರಿಸಿ ಪೊಟ್ಟಣದಲ್ಲಿ ತೆಗೆದುಕೊಂಡು ಹೋದರೆ ಹೋಟೇಲ್‌ಗೆ ಹಾಕುವ ಹಣವನ್ನು ಉಳಿಸುವುದರೊಂದಿಗೆ ಆರೋಗ್ಯವನ್ನೂ ಕಾಪಾಡಬಹುದು.



ಆನ್‌ಲೈನ್ ಪಾವತಿಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿರಿ

ರೈಲು ಮತ್ತು ಬಸ್ ಪ್ರಯಾಣದ ಸಂದರ್ಭದಲ್ಲಿ ಟಿಕೆಟ್ ಖರೀದಿಗೆ, ಸಿನಿಮಾ ಟಿಕೆಟ್ ಬುಕ್ ಮಾಡಲು, ವಿದ್ಯುತ್ ಮತ್ತು ದೂರವಾಣಿ, ನೀರಿನ ಬಿಲ್ ಪಾವತಿಸಲು, ಹಾಗೂ ಇತರ ಇಂಟರ್‌ನೆಟ್ ಬ್ಯಾಂಕಿಂ–ಗ್, ಪೇಟಿಎಂ, ಭೀಮ್ ವ್ಯವಸ್ಥೆಯ ಮೂಲಕ ಆನ್‌ಲೈನ್ ಪಾವತಿಗೆ ಅವಕಾಶವಿರುವ ಎಲ್ಲಾ ಪಾವತಿಗಳನ್ನು ಆನ್‌ಲೈನ್ ಮೂಲಕ ಮಾಡುವುದು ಉತ್ತಮ. ಇದರಿಂದಾಗಿ ಪಾರದರ್ಶಕ, ನಿಖರ ಹಾಗೂ ವಸ್ತುನಿಷ್ಠವಾದ ಪಾವತಿ ಸಾಧ್ಯವಾಗುತ್ತದೆ. ಜೊತೆಗೆ ಪಾವತಿಗಾಗಿ ಕಛೇರಿಗೆ ತೆರಳುವ ಪ್ರಯಾಣದ ಮತ್ತು ಸರತಿಯ ಸಾಲಲ್ಲಿ ನಿಲ್ಲುವ ಸಮಯದ ಜೊತೆಗೆ ಪ್ರಯಾಣದ ವೆಚ್ಚವನ್ನೂ ಸಮರ್ಪಕವಾಗಿ ಉಳಿಸಬಹುದು. ಆನ್‌ಲೈನ್ ಪಾವತಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಕೇಂದ್ರ ಸರಕಾರವು ಪ್ರತೀ ಆನ್‌ಲೈನ್ ಪಾವತಿಗೆ ನಿಗದಿದ ಶೇಕಡಾ ದರದ ಪ್ರೋತ್ಸಾಹ ಧನವನ್ನೂ ಪಾವತಿದಾರರಿಗೆ ನೀಡುತ್ತಿದೆ.

ಹಿತ ಮಿತವಾದ ಪೀಠೋಪಕರಣಗಳನ್ನು ಬಳಸಿ

ಪಕ್ಕದವರ ಮನೆಯ ಐಷಾರಾಮಿ ಪೀಠೋಪಕರಣಗಳನ್ನು ನೋಡಿ ನಮಗೂ ಅದೇ ರೀತಿಯ ಪೀಠೋಪಕರಣಗಳು ನಮಗೂ ಬೇಕು ಎಂದು ಹಠಕ್ಕೆ ಬಿದ್ದು ಖರೀದಿಸಿ ನಿಮ್ಮ ಮನೆಯನ್ನು ಸ್ಟೋರ್ ರೂಮನ್ನಾಗಿ ಮಾಡಿಕೊಳ್ಳುವ ಬದಲಾಗಿ, ನಿಮಗೂ ನಿಮ್ಮ ಮನೆಗೂ ಅವಶ್ಯವಿರುವ ಹಾಗೂ ನಿಮ್ಮ ಮನೆಯಲ್ಲಿ ಬಳಸಲು ಅವಕಾಶವಿರುವಂತಹ ಪೀಠೋಪಕರಣಗಳನ್ನು ಅವಶ್ಯಕತೆಯಿದ್ದರಷ್ಟೇ ಖರೀದಿಸಿರಿ. ಪೀಠೋಪಕರಣಗಳು ನೋಡೋದಿಕ್ಕೆ ಸರಳ ಹಾಗೂ ಕುಳಿತುಕೊಳ್ಳಲು ಆರಾಮದಾಯಕವಾಗಿದ್ದರೆ ಸಾಕು. ಇದರಿಂದಾಗಿ ಅನಗತ್ಯ ಖರ್ಚನ್ನು ಕಡಿಮೆ ಮಾಡಿ ಉಳಿತಾಯ ಮಾಡಬಹುದು.

ಮೊಬೈಲ್ ಬಳಕೆ ಸಾಮಾನ್ಯವಾಗಿರಲಿ

ಇಂದಿನ ಯುಗದಲ್ಲಿ ಮೂರು ಹೊತ್ತು ಊಟ ಮಾಡಲು ಕಷ್ಟವಾದರೂ, ಅನಿವಾರ್ಯವಾಗಿರುವ ಶೌಚಾಲಯವಿಲ್ಲದಿದ್ದರೂ ಪರವಾಗಿಲ್ಲ, ಊಟಕ್ಕಿಂತಲೂ ಮೊಬೈಲ್ ಪ್ರಾಮುಖ್ಯವಾದ ವಸ್ತುವಾಗಿಬಿಟ್ಟಿದೆ. 'ಹೊಟ್ಟೆಗೆ ಹಿಟ್ಟಿಲ್ಲದ್ದಿದರೂ ಜುಟ್ಟಿಗೆ ಮಲ್ಲಿಗೆ' ಎಂಬ ಮಾತಿನಂತೆ ಪ್ರತಿಯೊಬ್ಬರಿಗೂ ಸ್ಮಾರ್ಟ್ ಫೋನೇ ಬೇಕು. ಫೋನ್‌ಗಳೇನೋ ಬೇಕು ಆದರೆ ನಮ್ಮ ಆದಾಯ ಹಾಗೂ ಅವಶ್ಯಕತೆಗನುಗುಣವಾಗಿ ಮೊಬೈಲ್‌ನ್ನು ಖರೀದಿಸಿ ಹಾಗೂ ಅವಶ್ಯವಿದ್ದಡೆಯಷ್ಟೇ ಬಳಸಿಕೊಳ್ಳಿರಿ. ನಿಮ್ಮ ಮೊಬೈಲ್ ಬಳಕೆ ಕೂಡಾ ಅವಶ್ಯಕತೆಗೆ ತಕ್ಕಷ್ಟೇ ಇದ್ದಲ್ಲಿ ಮೊಬೈಲ್ ಕರೆನ್ಸಿ, ಇಂಟ–ರ್‌ನೆಟ್, ಮೆಸೆಜ್ ಹೆಸರಿನಿಂದ ನಿಮ್ಮ ಜೇಬಿಗೆ ಕತ್ತರಿ ಬೀಳುವುದು ತಪ್ಪಿ ಉಳಿತಾಯ ಮಾಡಬಹುದಾಗಿದೆ. **ಆಕರ್ಷಕ ಜಾಹಿರಾತುಗಳ ಮೊಡಿಗೆ ಒಳಗಾಗದಿರಿ**

ದಿನನಿತ್ಯ ದೂರದರ್ಶನ, ವೃತ್ತಪತ್ರಿಕೆ, ಎಫ್.ಎಂ, ರೇಡಿಯೋ, ಜಾಹೀರಾತು ಫಲಕಗಳಲ್ಲಿ ಬರುವಂತಹ ಬಣ್ಣ ಬಣ್ಣದ ಹಾಗೂ ಮನಸೆಳೆಯುವ ಜಾಹಿರಾತುಗಳನ್ನು ನೋಡಿ ಅದರ ಮೋಡಿಗೆ ಒಳಗಾಗಿ ಅವುಗಳು ನಮಗೂ ಬೇಕು ಎಂದು ಆಸೆ ಪಟ್ಟು ಅವುಗಳನ್ನು ಖರೀದಿಸುವ ಗೀಳಿಗೆ ಬೀಳಬೇಡಿ. ಹಾಗೇನಾದರೂ ಮಾಡಲು ಹೊರಟರೆ ನಮ್ಮ ಜೇಬಿಗೆ ಅನಾವಶ್ಯಕ ಕತ್ತರಿ ಬೀಳುವುದಂತೂ ಗ್ಯಾರಂಟಿ. ಖರೀದಿಗೂ ಮುನ್ನ ಸಾಕಷ್ಟು ವಿಮರ್ಷೆಯನ್ನು ಮಾಡಿ ಅವುಗಳ ಖರೀದಿಯ ಅವಶ್ಯಕತೆ ಇದೆಯೇ ಎಂದು ಚಿಂತಿಸಿ ತೀರಾ ಅವಶ್ಯಕವೆನಿಸಿದಲ್ಲಿ ಮಾತ್ರ ಖರೀದಿಸಿ. ಇಂತಹ 'ಕೊಳ್ಳುಬಾಕ ಸಂಸ್ಕೃತಿ'ಯಿಂದ ಭವಿಷ್ಯದ ಜೀವನಕ್ಕೆ ಗಂಡಾಂತರ ಕಟ್ಟಿಟ್ಟ ಬುತ್ತಿ.

ಶುಭ ಸಮಾರಂಭಗಳ ಖರ್ಚಿನ ಮೇಲೆ ಹಿಡಿತವಿರಲಿ

'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂಬ ನಾಣ್ನುಡಿಯೇ ಇದೆ. ಅಂದರೆ ಒಂದು ಮನೆಯನ್ನು ಕಟ್ಟುವಾಗ ಅದರ ಖರ್ಚು ಅದೆಷ್ಟು ಹೋಗುತ್ತೋ ಹೇಳಲು ಅಸಾಧ್ಯ. ಅದೇ ರೀತಿ ಮದುವೆಗಾಗಿ ಅದೆಷ್ಟೇ ಖರ್ಚು ಮಾಡಿದರೂ ಅದು ಮರಳಿ ಬರುವ ಹಣವಲ್ಲ. ಎಷ್ಟು ಅದ್ಧೂರಿಯಾಗಿ ಮದುವೆ ಮಾಡಿದರೂ ಮದುವೆಗೆ ಬಂದ ಅತಿಥಿಗಳು ಹೊಟ್ಟೆ ತುಂಬಾ ಉಂಡು ಎನಾದರೊಂದು ಕೊಂಕು ಮಾತನಾಡಿಯೇ ಆಡುತ್ತಾರೆ. ಮನೆಯಲ್ಲಿ ನಡೆಯುವ ವಿವಿಧ ಸಮಾರಂಭಗಳು ಮತ್ತಿತರ ಶುಭಕಾರ್ಯಗಳನ್ನು ಆದಷ್ಟು ಕಡಿಮೆ ಖರ್ಚಿನಲ್ಲಿ ಮಾಡಿ ಮುಗಿಸುವುದು ಉತ್ತಮ. ಸಾಮೂಹಿಕ ವಿವಾಹಗಳಲ್ಲಿ ಮತ್ತು ಸರಳ ವಿವಾಹಗಳನ್ನು ಮಾಡುವುದರಿಂದ ಕೇವಲ ಉಳಿತಾಯ ಮಾತ್ರವಲ್ಲ ಭವಿಷ್ಯದ ದೊಡ್ಡದಾದ ಹೊರೆಯಿಂದಲೇ ಹೊರಬಂದಂತೆ.



ಕ್ರೆಡಿಟ್ ಕಾರ್ಡ್ ಬಳಕೆಗೆ ಪ್ರಾಶಸ್ತ್ಯವನ್ನು ನೀಡಿರಿ

ಇಂದಿನ ದಿನವು ಡಿಜಿಟಲ್ ಯುಗವಾಗಿದ್ದು, ನಗದು ರಹಿತ ವ್ಯವಹಾರಕ್ಕೆ ಕೇಂದ್ರ ಸರಕಾರವೂ ಪ್ರೋತ್ಸಾಹ ನೀಡುತ್ತಿದ್ದು, ಜನಧನ್ ಖಾತೆಗಳ ಮೂಲಕ ಪ್ರತಿಯೊಬ್ಬ ನಾಗರೀಕರೂ ಬ್ಯಾಂಕ್ ಖಾತೆಯನ್ನು ಹೊಂದುವ ಮೂಲಕ ನಗದು ರಹಿತ ವ್ಯವಹಾರಕ್ಕೆ ಆದ್ಯತೆಯನ್ನು ನೀಡಲಾಗುತ್ತಿದೆ. ಈ ಮೂಲಕ ಕ್ರೆಡಿಟ್ ಕಾರ್ಡ್‌ಗಳನ್ನು ಬಳಸುತ್ತಿದ್ದಲ್ಲಿ ಯಾವುದೇ ವಸ್ತುಗಳ ಖರೀದಿ ಹಾಗೂ ಯಾವುದೇ ಬಿಲ್ಲುಗಳನು ಪಾವತಿಸುವ ಸಂದರ್ಭಗಳಲ್ಲಿ 'ಕ್ಯಾಶ್ ಬ್ಯಾಕ್' ಅವಕಾಶಗಳಿದ್ದಲ್ಲಿ ಖಂಡಿತವಾಗಿಯೂ ಅವುಗಳನ್ನು ಬಸಿಕೊಳ್ಳಿರಿ.

ದುಶ್ಚಟಗಳ ದಾಸರಾಗಿದ್ದಲ್ಲಿ ಅವುಗಳಿಂದ ಹೊರಬನ್ನಿ

ಬೀಡಿ, ಸಿಗರೇಟು, ಸಾರಾಯಿ, ಗುಟ್ಕಾ ಇವುಗಳೇನು ನಮ್ಮ ಜೀವನಕ್ಕೆ ಅವಶ್ಯಕವಾದವುಗಳಲ್ಲ ಹಾಗೂ ಇವುಗಳ ಬಳಕೆ ಸಮಾಜದಲಿ ವ್ಯಕ್ತಿಯ ಗೌರವವನ್ನು ಕುಂಟಿತಗೊಳ್ಳಿಸುತ್ತದೆಯೇ ವಿನಃ ಇವುಗಳಿಂದ ಯಾವುದೇ ರೀತಿಯ ಹೆಸರನ್ನಂತೂ ತಂದುಕೊಡಲಾರವು. ಲಾಭದಾಯಕವಲ್ಲದ ಇವುಗಳನ್ನು ತ್ಯಜಿಸುವುದರಿಂದ ನಮ್ಮ ಸಂಸಾರದ ಆದಾಯವೆಂಬ ಮಡಿಕೆಯಲ್ಲಿ ಬಿದ್ದಿರುವ ಸೋರಿಕೆಯೆಂಬ (ಖರ್ಚು) ರಂದ್ರವನ್ನು ಮುಚ್ಚಿದಂತೆ ಆಗುವುದಲ್ಲದೇ ಪರೋಕ್ಷವಾಗಿ ಉಳಿತಾಯ ಮಾಡುವ ನೇರ ಮಾರ್ಗವಾಗಿದೆ.



ಮಾಡುವದ್ದರಿಂದ ಹಿಂದಕ್ಕೆ ಸರಿಯುವುದು ಉಳಿತಾಯದ ಪ್ರಥಮ ಮಾರ್ಗವಾಗಿದೆ.

ಅಗತ್ಯವಿದ್ದಾಗ ಮಾತ್ರ ಸ್ವಂತ ವಾಹನವನ್ನು ಬಳಸುವ ಪರಿಪಾಠವನ್ನು ಬೆಳೆಸಿಕೊಳ್ಳಿ

ಇಂದಿನ ದಿನಗಳಲ್ಲಿ ನಿರಂತರವಾಗಿ ಏರಿಳಿತದಿಂದ ಕೂಡಿರುವ ಹಾಗೂ ಗಗನಕ್ಕೇರಿರುವ ಪೆಟ್ರೋಲ್ ಬೆಲೆ ಹಾಗೂ ಟ್ರಾಫಿಕ್ ಜಾಮ್‌ನ ಕಿರಿಕಿರಿಯಲ್ಲಿ ಸ್ವಂತ ವಾಹನದ ಬಳಕೆಯೂ ತುಂಬಾ ದುಬಾರಿ ಹಾಗೂ ದುಸ್ತರವಾಗುತ್ತದೆ. ತೀರಾ ಅವಶ್ಯಕವಲ್ಲದಿದ್ದದೂ, ಶೋಕಿಗಾಗಿ, ಅಂತಸ್ತಿಗಾಗಿ ಹಾಗೂ ತೀರಾ ಅವಶ್ಯವಲ್ಲದ ವಿಚಾರಗಳಿಗಾಗಿ ಸ್ವಂತ ವಾಹನದಲ್ಲಿ ನಗರವಿಡೀ ಸುತ್ತುವ ಪರಿಪಾಠವು

ಗ್ರಾಮಗಳಿಗೆ ತೆರಳಿ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ;ಫಲಾನುಭವಿಗಳ ಸಮಸ್ಯೆಗಳಿಗೆ ಅಧಿಕಾರಿಗಳಿಂದ ಸ್ಪಂದನೆ



ಔರಾದ್ : ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದಲ್ಲಿ ಗ್ರಾಮೀಣ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಸ್ಥಳದಲ್ಲಿಯೇ ಅರಿತುಕೊಂಡು, ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ತಾಲೂಕು ಪಂಚ ಗ್ಯಾರಂಟಿ ಸಮಿತಿಯ ಅಧ್ಯಕ್ಷರು ಹಾಗೂ ಕೆಡಿಪಿ ಸದಸ್ಯರಾದ ಚೆನ್ನಪ್ಪ ಉಪ್ಪೆ ಅವರ ನೇತೃತ್ವದಲ್ಲಿ ಸೋಮವಾರ ತಾಲೂಕಿನ ಎಕಲಾರ, ಸಂತಪೂರ, ಜೋಜನಾ, ಗುಡಪಳ್ಳಿ, ಚಿಂತಾಕಿ ಹಾಗೂ ಸುಂಧಾಳ ಗ್ರಾಮ ಪಂಚಾಯಿತಿಗಳಲ್ಲಿ 'ನಮ್ಮ ನಡೆ ಹಳ್ಳಿ ಕಡೆ' ಕಾರ್ಯಕ್ರಮ ನಡೆಯಿತು.

ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಅಧಿಕಾರಿಗಳು ಭೇಟಿ ನೀಡಿ, ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ ಯೋಜನೆ ಹಾಗೂ ಯುವ

ಡಾ.ರಾಘವೇಂದ್ರ & ಡಾ. ಶೈಲಜಾಗೆ ಅಕಾಡೆಮಿ ಫೆಲೋ ಗೌರವ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಇ ವಿಶ್ವವಿದ್ಯಾಲಯದ ರಜಿಸ್ಟಾರ ಡಾ. ರಾಘವೇಂದ್ರ ವಿ. ಕುಲಕರ್ಣಿ ಮತ್ತು ಸಮುದಾಯ ವೈದ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ಶೈಲಜಾ ಪಾಟೀಲ ಅವರಿಗೆ ರಾಜ್ಯ ಸರಕಾರದ ಪ್ರತಿಷ್ಠಿತ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಫೆಲೋ ಗೌರವ ಲಭಿಸಿದೆ.

ಡಾ. ರಾಘವೇಂದ್ರ ಕುಲಕರ್ಣಿ ಅವರಿಗೆ 2025ನೇ ವರ್ಷದ ಅಕಾಡೆಮಿ ಫೆಲೋ ಗೌರವ ಸಂದಿದೆ. ಅವರು ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಕ್ಯಾನ್ಸರ್‌ಗೆ ಪಾಲಿಮರ್ ಆಧಾರಿತ ಔಷಧ ಸಂಶೋಧಕರಾಗಿದ್ದಾರೆ. ಇವರು 2021 ರಿಂದ ಸತತ ಐದು ವರ್ಷಗಳ ಕಾಲ "ವಿಶ್ವದ ಉನ್ನತ 2% ವಿಜ್ಞಾನಿಗಳ" ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಡಾ. ಶೈಲಜಾ ಪಾಟೀಲ ಅವರಿಗೆ 2024 ನೇ ವರ್ಷದ ಅಕಾಡೆಮಿ ಫೆಲೋ ಗೌರವ ಲಭಿಸಿದೆ. ಅವರು ಸಾರ್ವಜನಿಕ ಆರೋಗ್ಯ ಪೋಷಣೆ, ತಾಯಿ ಮತ್ತು ಮಗುವಿನ ಆರೋಗ್ಯ, ಸಾಂಕ್ರಾಮಿಕವಲ್ಲದ ರೋಗಗಳು ಮತ್ತು ಪರಿಸರ ಆರೋಗ್ಯ ಕ್ಷೇತ್ರಗಳಲ್ಲಿ ಸಂಶೋಧಕರಾಗಿದ್ದಾರೆ. ಇವರು 2016 ನೇ ಸಾಲಿನ ಕರ್ನಾಟಕ ಸರ್ಕಾರದ ಕಲ್ಪನಾ ಚಾವ್ಲಾ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ.

ಪ್ರಾಧ್ಯಾಪಕರ ಈ ಸಾಧನೆಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ, ಕುಲಾಧಿಪತಿ ಬಿ. ಎಂ. ಪಾಟೀಲ, ಸಮಕುಲಾಧಿಪತಿ ಪ್ರೊ. ವೈ. ಎಂ. ಜಯರಾಜ ಹಾಗೂ ಕುಲಪತಿ ಪ್ರೊ. ಅರುಣ ಇನಾಮದಾರ ಅಭಿನಂದನೆ ಸಲ್ಲಿಸಿದ್ದಾರೆ.

ನ.30ರೊಳಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2026–27ನೇ ಸಾಲಿನ ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮುಸ್ಲಿಂ, ಕ್ರಿಶ್ಚಿಯನ್, ಜೈನ, ಸಿಖ್, ಪಾರ್ಸಿ ಹಾಗೂ ಬೌದ್ಧ ಸಮುದಾಯದ ವಿದ್ಯಾರ್ಥಿಗಳು 2025–26ನೇ ಸಾಲಿನ ಎಸ್‌ಎಸ್‌–ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇ.90ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಬಹುದು. ಆಸಕ್ತರು ನ.30ರೊಳಗೆ ಆಫ್ ಲೈನ್ ಮೂಲಕ ಅರ್ಜಿ ಸಲ್ಲಿಸಿ, ಅಗತ್ಯ ದಾಖಲೆಗಳೊಂದಿಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಕಚೇರಿಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವಿಜಯಪುರ 08352–295523, ಜಿಲ್ಲಾ ಮಾಹಿತಿ ಕೇಂದ್ರ ವಿಜಯಪುರ 8123710766, ಮುದ್ದೇಬಿಹಾಳ 8722445552, ಬಸವನಬಾಗೇವಾಡಿ 9972340721, ಸಿಂದಗಿ.9035558609, ಹಾಗೂ ಇಂಡಿ 9900109759 ಈ ಕೇಂದ್ರಗಳಲ್ಲಿಯೂ ಮಾಹಿತಿ ಪಡೆಯಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿಗಳ ಪ್ರಕಟಣೆ ತಿಳಿಸಿದೆ.

ಸಾಂಸ್ಕೃತಿಕ ಸ್ಪರ್ಧೆಗಳು ಪ್ರತಿಭೆ ಅನಾವರಣಕ್ಕೆ ವೇದಿಕೆ : ಕಲಾದಗಿ



■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ವಿದ್ಯಾರ್ಥಿಗಳು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸುವ ಮೂಲಕ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಬೇಕು. ಸ್ಪರ್ಧೆಯಲ್ಲಿ ಸೋಲು–ಗೆಲುವು ಸಹಜವಾಗಿದ್ದು, ಎರಡನ್ನೂ ಸಮಾನ ಮನೋಭಾವದಿಂದ ಸ್ವೀಕರಿಸುವ ಗುಣ ಬೆಳೆಸಿಕೊಳ್ಳಬೇಕು ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷ ದಸ್ತಗೀರ ಕಲಾದಗಿ ಹೇಳಿದರು.

ಪಟ್ಟಣದ ಶ್ರೀ ಸಂಗಮೇಶ್ವರ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ವಿಜಯಪುರ ಹಾಗೂ ಶ್ರೀ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಸಹಯೋಗದಲ್ಲಿ 2026–27ನೇ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ಜಿಲ್ಲಾಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ನಾನು ಇದೇ ಸಂಸ್ಥೆಯಲ್ಲಿ ಎಲ್‌ಕೆಜಿಯಿಂದ ಎಸ್‌ಎಸ್‌ಎಲ್‌ಸಿವರೆಗೆ ವಿದ್ಯಾಭ್ಯಾಸ ಮಾಡಿದ್ದು, ಇಂದು ಪಟ್ಟಣ ಪಂಚಾಯಿತಿ ಅಧ್ಯಕ್ಷನಾಗಲು ಈ ಸಂಸ್ಥೆಯಶಿಕ್ಷಣಹಾಗೂಮಾರ್ಗದರ್ಶನವೇಪ್ರಮುಖ ಕಾರಣವಾಗಿದೆ. ಸಂಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಬೆಳೆಸಲಾಗುತ್ತಿದೆ. ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳುವ ಕಾರ್ಯಕ್ರಮಗಳು ಸದಾ ಯಶಸ್ವಿಯಾಗಿ ನಡೆಯುತ್ತವೆ.

ಇಂದಿನ ಸಾಂಸ್ಕೃತಿಕ ಸ್ಪರ್ಧೆಯೂ ಯಶಸ್ವಿಯಾಗಲಿ' ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅತಿಥಿಯಾಗಿ ಮಾತನಾಡಿದ ಶ್ರೀ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಎಸ್.ಬಿ. ಪತಂಗಿ, ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ವಿಭಿನ್ನ ಪ್ರತಿಭೆಗಳು ಅಡಗಿರುತ್ತವೆ. ಅವುಗಳನ್ನು ಗುರುತಿಸಿ, ಪ್ರೋತ್ಸಾಹಿಸಿ ಹೊರತರುವ ಜವಾಬ್ದಾರಿ ಶಿಕ್ಷಕರ ಮೇಲಿದೆ. ವಿದ್ಯಾರ್ಥಿಗಳ ಪ್ರತಿಭೆಗೆ ವೇದಿಕೆ ಕಲ್ಪಿಸುವ ಉದ್ದೇಶದಿಂದ ಇಂತಹ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಹೆಚ್ಚಿನ ಮಹತ್ವ ನೀಡಬೇಕು. ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ತಮ್ಮ ಪ್ರತಿಭೆಯನ್ನು ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಲಾ ಶಿಕ್ಷಣ ಇಲಾಖೆಯ ಶಾಖಾಧಿಕಾರಿ ಬಿ.ಟಿ. ಗೊಂಗಡಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಬಿ.ಯು. ಗಿಡ್ಡಪ್ಪಗೋಳ ವಹಿಸಿದ್ದರು. ಮಾಜಿ ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಸದಸ್ಯ ಸಿ.ಎಸ್. ಗಿಡ್ಡಪ್ಪಗೋಳ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು.

ಸಂಸ್ಥೆಯ ನಿರ್ದೇಶಕರಾದ ಟಿ.ಟಿ. ಹಗೇದಾಳ, ಎಸ್.ಸಿ. ಶೀಲವಂತ, ನಿವೃತ್ತ ಶಿಕ್ಷಕ ಪಿ.ಸಿ. ನಾಗರಾಳ, ಮಹಾಮಂಡಳ ಪ್ರಾಚಾರ್ಯರ ಅಧ್ಯಕ್ಷ ಡಿ.ಬಿ. ತಿಕೋಟಿ, ರಾಜ್ಯ ಉಪಾಧ್ಯಕ್ಷ ಎಲ್.ಐ. ಹುಣಸಿಕಟ್ಟಿ, ಸಂಘದ ಜಿಲ್ಲಾಧ್ಯಕ್ಷ ಎಂ.ಡಿ. ಹೆಬ್ಬಿ, ಪ್ರಾಚಾರ್ಯ ಡಾ. ಎ.ಡಿ. ಚವ್ಹಾಣ, ಮುಖ್ಯ ಶಿಕ್ಷಕ ರಾಜಶೇಖರ ಉಮರಾಣಿ, ದೈಹಿಕ ಶಿಕ್ಷಣ ಉಪನ್ಯಾಸಕ ರಮೇಶ ತೋಟದ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಪ್ರಾಚಾರ್ಯ ಡಾ. ಎ.ಡಿ. ಚವ್ಹಾಣ ಸ್ವಾಗತಿಸಿದರು. ಉಪನ್ಯಾಸಕ ಮಂಜುನಾಥ ಮಟ್ಯಾಳ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ನರ್ಸಿಂಗ್ ವಿದ್ಯಾರ್ಥಿಗಳ ಪ್ರೋತ್ಸಾಹ ಧನ: ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿಗೆ ಬಿ.ಎಸ್ಸಿ ನರ್ಸಿಂಗ್ ಹಾಗೂ ಜಿಎನ್‌ಎಂ ನರ್ಸಿಂಗ್ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಡಿ.31ರೊಳಗೆ "ಸೇವಾಒನ್" https://seva-one.karnataka.gov.in/service/ ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಿ, ಅಗತ್ಯ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರಿಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08352–295523 ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.



ಬೆಂಗಳೂರಿನಲ್ಲಿ ಈಚೆಗೆ ನಡೆದ 73ನೇ ಸಹಕಾರ ಸಪ್ತಾಹ–2026ರ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ. ಕೆ.ಶಿವಕುಮಾರ ಅವರು ಯಾದಗಿರಿ ಜಿಲ್ಲೆಯ ಅಬ್ಬೆತುಮಕೂರಿನ ಆರ್.ಮಹಾದೇವಪ್ಪ ಅವರು ಸೇರಿದಂತೆ 101 ಜನರಿಗೆ "ಸಹಕಾರ ರತ್ನ" ಪ್ರಶಸ್ತಿ ಪ್ರದಾನ ಮಾಡಿದರು.

371(ಜೆ) ಸೇರ್ಪಡೆ ಹೋರಾಟಕ್ಕೆ ಮಹಿಳಾ ಮಂಡಳ ಬೆಂಬಲ

■ ಉದಯರಶ್ಮಿ ದಿನಪತ್ರಿಕೆ



ಸಿಂದಗಿ: ನಗರದ ಬಸವೇಶ್ವರ ಸರ್ಕಲ್ ಹತ್ತಿರ ಗೋಕಾಕ ಚಳವಳಿಯ ರೂವಾರಿ ಶ್ರೀ ರೇ.ಚ. ರೇವಡಿಗಾರ ಪ್ರತಿಷ್ಠಾನ ಹಾಗೂ 371(ಜೆ) ಹೋರಾಟ ಸಮಿತಿ ನೇತೃತ್ವದಲ್ಲಿ 49 ದಿನಗಳಿಂದ ನಡೆಯುತ್ತಿರುವ ಧರಣಿ ಸತ್ಯಾಗ್ರಹಕ್ಕೆ ಮಹಿಳಾ ಜಾಗರಣಾ ವೇದಿಕೆ ಹಾಗೂ ಕರ್ನಾಟಕ ಮಹಿಳಾ ಪರ ಜನ ಜಾಗೃತಿ ಸಮಿತಿ ಪದಾಧಿಕಾರಿಗಳು ಬೆಂಬಲ ವ್ಯಕ್ತಪಡಿಸಿದರು.

ಕರ್ನಾಟಕ ಮಹಿಳಾ ಪರ ಜನ ಜಾಗೃತಿ ಸಮಿತಿ ಜಿಲ್ಲಾಧ್ಯಕ್ಷೆ ನೀಲಮ್ಮ ಯಡ್ರಾಮಿ, ಮಾತನಾಡಿ, ವಿಜಯಪುರ ಜಿಲ್ಲೆಯು ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕವಾಗಿ ಹಿಂದುಳಿದಿದೆ ಎಲ್ಲ ಅಂಶಗಳು ಡಾ. ನಂಜುಂಡಪ್ಪ ವರದಿಯಲ್ಲಿ ಉಲ್ಲೇಖವಿದೆ ಅಲ್ಲದೆ ಕಲ್ಯಾಣ ಕರ್ನಾಟಕದ 6 ಜಿಲ್ಲೆಗಳಲ್ಲಿ ಕೈಗಾರಿಕಾ ಘಟಕಗಳು ಸ್ಥಾಪನೆಯಾಗಿ ಅಲ್ಲಿರುವ ಜನರಿಗೆ ಉದ್ಯೋಗ ಸೃಷ್ಟಿಸಿದೆ ಅದೇ ರೀತಿಯಲ್ಲಿ ಈ ಜಿಲ್ಲೆಯನ್ನು 371 ಜೆಗೆ ಸೇರ್ಪಡೆ ಮಾಡಿದರೆ ಇಲ್ಲಿರುವ ಮಕ್ಕಳ ಬಾಳು ಬೆಳಗಿದಂತಾಗುತ್ತದೆ. ನಾವೇನು ಸಮ್ಮನೆ ಕೇಳುತ್ತಿಲ್ಲ ಆ ವರದಿಯಲ್ಲಿದೆ ಎನ್ನುವ ಕಾರಣಕ್ಕೆ ಧ್ವನಿ ಎತ್ತಿದ್ದೇವೆ ಆ ವರದಿ ತಪ್ಪಾಗಿದ್ದರೆ ಎಲ್ಲವನ್ನು ರದ್ದುಗೊಳಿಸಿ ಪುನರ್ ಪರಿಶೀಲನೆ ಮಾಡಿ ಈ ಬಾಗಕ್ಕೂ ಸೌಲಭ್ಯ ಒದಗಿಸಿಕೊಡುವಲ್ಲಿ ಡಿ.2 ರಂದು ನಡೆಯಲಿರುವ ಚಳಿಗಾಲ ಅಧಿವೇಶನದಲ್ಲಿ ಈ ವಿಷಯದ ಕುರಿತು ಚರ್ಚೆ ನಡೆಬೇಕು ಎಂದು ಒತ್ತಾಯಿಸಿದರು.

ಮಹಿಳಾ ಜಾಗರಣಾ ವೇದಿಕೆಯ ಶೈಲಜಾ ಸ್ಥಾವರಮಠ ಮಾತನಾಡಿ, ರಜಾಕರ ಹಾವಳಿಯಲ್ಲಿ ನಗರದ ಪ್ರದೇಶದ ಗೋಲಿಬಾರ ಮಡ್ಡಿ, ಕಕ್ಕಳಮೇಲಿ, ಮಾಡಬಾಳ, ಚಟ್ಟರಕಿ, ಸೇರಿದಂತೆ ತಾಲೂಕಿನ ಕೆಲವು ಕಡೆಗಳಲ್ಲಿ ರಜಾರಕರ ಧಂಗೆಯಲ್ಲಿ ಶರಣಗೌಡ ಸರ್‌ಇನಾಮದಾರ, ಸಿದ್ದಗೊಂಡಪ್ಪ ಪಾಟೀಲ ಸೇರಿದಂತೆ ಅನೇಕರು ಹೋರಾಟ ನಡೆಸಿರುವ ಬಗ್ಗೆ ದಾಖಲೆಗಳಿವೆ ಅದರ ಮರುಪರಿಶೀಲನೆ ನಡೆಸುವುದು ಮಹಿಳೆಯರ ಹಕ್ಕೋತ್ತಾಯವಾಗಿದೆ ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಜಾಗ್ರಣ ವೇದಿಕೆ ಹಾಗೂ ಕರ್ನಾಟಕ ಮಹಿಳಾ ಪರ ಜನ ಜಾಗೃತಿ ಸಮಿತಿಯ ಜಿಲ್ಲಾಧ್ಯಕ್ಷ ನೀಲಮ್ಮ ಯಡ್ರಾಮಿ, ಮಹಿಳಾ ಜಾಗೃಣ ವೇದಿಕೆಯ ಶೈಲಜಾ ಸ್ಥಾವರಮಠ, ಅರುಣಾ ಹಿರೇಮಠ, ಲಕ್ಷೀಬಾಯಿ ಕುರಿ, ಭಾಗ್ಯಶ್ರೀ ತಳವಾರ, ಲಕ್ಕಮ್ಮ ಬಿರಾದಾರ, ಭಾಗ್ಯಶ್ರೀ ಯಾಳವಾರ, ಜಯಶ್ರೀ ಯಾಳವಾರ, ಅಂಬಿಕಾ ಹೊರಕೇರಿ, ಬಾಗು ಮಣ್ಣೂರ, ಸಮಿತ್ರಾ ಹಡಪದ, ಶರಣಮ್ಮ ಬಿಳೆಬಾವಿ, ಗೌಶಿಯಾ ಶೇಖ, ಭಾರತಿ ಗುತ್ತರಗಿ, ಶಿವಮ್ಮ ಬೆಟಗೇರಿ, ಶೃತಿ ಗೂಳೂರ. ಶಾರದಾ ಸಂಗಮ, ಭಾರತಿ ಹಿರೇಮಠ, ಜಗದೇವಿ ಕಲಬುರ್ಗಿ, ಸವಿತಾ ಗಾನೂರ, ಸಾವಿತ್ರಿ ಬಂದರಕೋಟಗಿ ಸೇರಿದಂತೆ ಸಮಿತಿಯ ಶಂಕರ ಮಲ್ಲೇದ, ಪಂಡಿತ ಯಂಪೂರೆ, ಸಂಗಪ್ಪ ಬ್ಯಾಕೋಡ ಇದ್ದರು.

ಬೆಳಗಾವಿ ವಿಭಾಗ ಮಟ್ಟದ ಖೋ–ಖೋ ಪಂದ್ಯಾವಳಿಗೆ ತೆರೆ

ಬಾಗಲಕೋಟೆ ಬಾಲಕರ ತಂಡ, ವಿಜಯಪುರ ಬಾಲಕಿಯರ ತಂಡ ಚಾಂಪಿಯನ್

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ತಾಲೂಕಿನ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ವಜ್ರಮಹೋತ್ಸವ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ಬೆಳಗಾವಿ ವಿಭಾಗ ಮಟ್ಟದ ಖೋ–ಖೋ ಪಂದ್ಯಾವಳಿ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಪಂದ್ಯಾವಳಿಯಲ್ಲಿ ಬಾಲಕರ ವಿಭಾಗದಲ್ಲಿ ಬಾಗಲಕೋಟೆ ಜಿಲ್ಲಾ ತಂಡ ಹಾಗೂ ಬಾಲಕಿಯರ ವಿಭಾಗದಲ್ಲಿ ವಿಜಯಪುರ ಜಿಲ್ಲಾ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿವೆ.

ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಬಾಗಲಕೋಟೆ ಜಿಲ್ಲಾ ತಂಡವು ಅತ್ಯುತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದುಕೊಂಡರೆ, ವಿಜಯಪುರ ಜಿಲ್ಲಾ ತಂಡ ದ್ವಿತೀಯ ಸ್ಥಾನ ಗಳಿಸಿತು. ಬಾಲಕಿಯರ ವಿಭಾಗದಲ್ಲಿ ವಿಜಯಪುರ ಜಿಲ್ಲೆಯನ್ನು ಪ್ರತಿನಿಧಿಸಿದ್ದ ಮಸೂತಿ ಗ್ರಾಮದ ಶ್ರೀ ಗುರು ಸಂಗನಬಸವೇಶ್ವರ ವಜ್ರಮಹೋತ್ಸವ ಪ್ರೌಢಶಾಲೆಯ ತಂಡವು ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿತು. ಬೆಳಗಾವಿ ಜಿಲ್ಲಾ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು.

ಪಂದ್ಯಾವಳಿಯ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಜೆ. ಬಿರಾದಾರ, ವೀರೇಶ್ವರ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಸಂತೋಷ ಚನಗೊಂಡ, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಬಿ.ಎಂ. ಪಾಟೀಲ, ತಾಲೂಕು ದೈಹಿಕ ಶಿಕ್ಷಣಾಧಿಕಾರಿ ನರೇಗಲ್, ಮುಖಂಡರಾದ ಕೆ.ವಿ. ಕುಲಕರ್ಣಿ, ಸಂಘದ ಕಾರ್ಯದರ್ಶಿ ಈರಣ್ಣ ಬರಗಿ, ಉಪಾಧ್ಯಕ್ಷರಾದ ಪ್ರಕಾಶ ಗಂಗಾಧರಮಠ, ಆನಂದ ಬಿಸ್ಟಗೊಂಡ, ರಾಮಣ್ಣ ಯರಂತೇಲಿ, ಐ.ಎಂ. ಪಾಟೀಲ, ಮಲ್ಲಯ್ಯ ಇಂಗಳಗಿ ಸೇರಿದಂತೆ ಸಂಘದ ನಿರ್ದೇಶಕರು ಉಪಸ್ಥಿತರಿದ್ದರು.

ಸಂಗನಬಸವೇಶ್ವರ ಸ್ಪೋರ್ಟ್ಸ್ ಕ್ಲಬ್‌ನ ಮಲ್ಲು ವಾಲಿಕಾರ, ರುದ್ರಗೌಡ ಗಂಗಲ್, ಶೇಖರ ಬಿಸ್ಟಗೊಂಡ, ಕಂಡಿತು. ರಾಜು ಬಂಡಿವಡ್ಡರ, ಪ್ರವೀಣ ಕಾಗಲ, ಪ್ರವೀಣ ಗಣಾಚಾರಿ ಸೇರಿದಂತೆ ಕ್ಲಬ್‌ನ ಸದಸ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಪಂದ್ಯಾವಳಿಯ ಯಶಸ್ವಿ ಆಯೋಜನೆಗೆ ಸಹಕರಿಸಿದ ಸಂಘಟಕರು, ಕ್ರೀಡಾ ಶಿಕ್ಷಕರು, ಪದಾಧಿಕಾರಿಗಳು ಹಾಗೂ ಕ್ರೀಡಾಪಟುಗಳಿಗೆ ಅಭಿನಂದನೆ ಸಲ್ಲಿಸಲಾಯಿತು. ಕ್ರೀಡಾ ಮನೋಭಾವ, ಶಿಸ್ತು ಮತ್ತು ತಂಡದ ಒಗ್ಗಟ್ಟಿನ ಪ್ರದರ್ಶನದೊಂದಿಗೆ ಪಂದ್ಯಾವಳಿ ಸಂಭ್ರಮದಿಂದ ತೆರೆ ಕಂಡಿತು.

ಮಳೆಯ ನಿಮಿತ್ಯ ಮನೆ ಮನೆಯಲ್ಲಿ ಸಾಯಿ ಭಜನೆ

■ ಉದಯರಶ್ಮಿ ದಿನಪತ್ರಿಕೆ



ಇಂಡಿ: ನಗರದ ಶ್ರೀ ಸಾಯಿ ಬಾಬಾ ಭಜನಾ ಮಹಿಳಾ ಮಂಡಳ ವತಿಯಿಂದ ಮನೆ ಮನೆಯಲ್ಲಿ ಭಜನಾ ಕಾರ್ಯಕ್ರಮದ ನಿಮಿತ್ಯ 20 ದಿನಗಳ ವರೆಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದು 21 ನೆಯ ದಿನದ ಕಾರ್ಯಕ್ರಮ ಪ್ರಸಾದ ನರೇಶ ಕೋಳೆಕರ ಇವರ ಮನೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಭಜನಾ ಮಂಡಳಿ ತಾಲೂಕಾ ಅಧ್ಯಕ್ಷೆ ಗಂಗಾ ಗಲಗಲಿ ಮಾತನಾಡಿ, ನಮಗೆ ಕೇವಲ ಪ್ರತಿಶತ ಮೂರರಷ್ಟು ನೀರು ಮಾತ್ರ ಭೂಮಿಯ ಮೇಲೆ ಕುಡಿಯಲು ನೀರಿದೆ. ಹೀಗಾಗಿ ನೀರನ್ನು ಮಿತವಾಗಿ ಬಳಸಬೇಕಾಗಿದೆ. ಆಣೆಕಟ್ಟುಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಿರುವದರಿಂದ ಅಂತರ್ಜಲ ಮಟ್ಟವೂ ತೀರ್ವವಾಗಿ ಕುಸಿದಿದೆ. ಜವಾಬ್ದಾರಿಯುತ ನಾಗರಿಕರಾಗಿ ನೀರು ವ್ಯರ